
# ನೇಸರು

ತಿಂಗಳೋಲೆ

₹ 5/-

PAGES 20

JULY 2026 | Nesaru Tingalole | Vol. XLIV - 07



## ಮುಂಬೈಯ ಠಾಣೆ ಕ್ರೀಕ್‌ನಲ್ಲಿ ಫ್ಲೆಮಿಂಗೋಗಳ ವಲಸೆ

ಮೈಸೂರು ಅಸೋಸಿಯೇಷನ್ ಮುಂಬೈ

**THE MYSORE ASSOCIATION, BOMBAY**

393, Bhau Daji Road, Matunga, Mumbai - 400 019. | Tel.: 2403 7065

Email : mysoreassociation.mumbai@gmail.com

# ರಾಷ್ಟ್ರೀಯ ವೃತ್ತಿರಂಗದಲ್ಲಿ ಮರಾಠಿ ನಾಟಕದ ಅಸ್ಮಿತೆ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವೃತ್ತಿ ರಂಗಭೂಮಿ ರಂಗಾಯಣ ದಾವಣಗೆರೆಯಲ್ಲಿ 10-04-2026 ರಿಂದ 14-04-2026ರವರೆಗೆ ರಾಷ್ಟ್ರೀಯ ವೃತ್ತಿ ರಂಗೋತ್ಸವ 2026 ಆಯೋಜನೆಗೊಂಡಿತ್ತು. ದಾವಣಗೆರೆಯ ದೃಶ್ಯಕಲಾ ಮಹಾವಿದ್ಯಾಲಯದಲ್ಲಿ ನಡೆದ ಈ ಹಬ್ಬದಲ್ಲಿ ಕನ್ನಡ, ಮರಾಠಿ, ತೆಲುಗು, ತಮಿಳು ಮತ್ತು ಮಲಯಾಳಂ ನಾಟಕಗಳು ಹಾಗೂ ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು.

ದಾವಣಗೆರೆ ರಂಗಾಯಣದ ನಿರ್ದೇಶಕರಾದ ಶ್ರೀ ಮಲ್ಲಿಕಾರ್ಜುನ ಕಡಕೋಳರ ಆಹ್ವಾನ ಹಾಗೂ ಮುಂಬಯಿಯ ಡಾ. ಭರತ್ ಕುಮಾರ್ ಪೊಲಿಪು ಇವರ ಸೂಚನೆಯ ಮೇರೆಗೆ ರಂಗಕರ್ಮಿ ಶ್ರೀಮತಿ ಅಹಲ್ಯಾ ಬಲ್ಲಾಳ ಈ ವಿಚಾರ ಸಂಕಿರಣದಲ್ಲಿ ' ಕೊಂಕಣ ಪರಿಸರದ ವೃತ್ತಿ ರಂಗಭೂಮಿ' ಎಂಬ ವಿಷಯದ ಕುರಿತು ಪ್ರಬಂಧ ಮಂಡನೆ ಮಾಡಿದರು.




183ಕ್ಕೂ ಹೆಚ್ಚು ವರ್ಷಗಳ ಚರಿತ್ರೆಯಿರುವ ನಗರ ಪ್ರದೇಶದ ಮರಾಠಿ ರಂಗಭೂಮಿಯಲ್ಲಿ ವ್ಯಾವಸಾಯಿಕ ನಾಟಕರಂಗ ಒಂದು ಪ್ರಮುಖ ಭಾಗ. ಸ್ವಾರಸ್ಯವೆಂದರೆ ಇದು ಆರಂಭವಾದದ್ದು ಕನ್ನಡದ ಯಕ್ಷಗಾನದ ಪ್ರೇರಣೆಯಿಂದ; ಇದು ತಿರುಗಾಟದ ಉದ್ದೇಶವನ್ನು ಹೊಂದಿದೆ. ವಿಷ್ಣುದಾಸ ಭಾವೆಯವರ 'ನಾಟ್ಯಕವಿತಾ' 'ಸೀತಾ ಸ್ವಯಂವರ'ದಿಂದ ಮೊದಲುಗೊಂಡು ಮುಂದೆ ಗದ್ಯ ನಾಟಕ, ಸಂಗೀತ ನಾಟಕಗಳು, ಸಾಮಾಜಿಕ-ರಾಜಕೀಯ ಪ್ರಜ್ಞೆಯ ನಾಟಕಗಳು ಬಂದವು. ಸಿನೆಮಾದಿಂದಾಗಿ ರಂಗಭೂಮಿ ಕುಗ್ಗಿದಾಗ ಅದನ್ನು ಮುಂದುವರಿಸಲು ಪ್ರಯತ್ನಗಳು ನಡೆದು, ಮರಾಠಿಗರ ರಂಗಪ್ರೇಮ ಗೆದ್ದಿತು.

ಕಾಲಕ್ರಮೇಣ ಪ್ರಾಯೋಗಿಕ ನಾಟಕಗಳ ಹವಾ ಬೀಸಿತಾದರೂ ವೃತ್ತಿ ರಂಗಭೂಮಿ ತನ್ನದೇ ರೀತಿಯಲ್ಲಿ ಮರು ಜೀವ ಪಡೆಯುತ್ತಲೇ ಇತ್ತು. ಸಮಾನಾಂತರ ರಂಗಭೂಮಿಯ ಹಲವರು ವೃತ್ತಿರಂಗಕ್ಕೆ ಸೇರಿದರು. ದೇಶದ ಇತರ ಕಡೆಗಳ ಹೋಲಿಕೆಯಲ್ಲಿ ಮರಾಠಿ ವೃತ್ತಿ ರಂಗಭೂಮಿ 1990ರ ದಶಕದವರೆಗೂ ಬಲಶಾಲಿ ಆಗಿತ್ತು. ಈಗಲೂ ಇದು ಸ್ಪರ್ಧಾತ್ಮಕ ನಾಟಕಗಳಿಂದ, ಪ್ರಾಯೋಗಿಕ ನಾಟಕಗಳಿಂದ ಸ್ಫೂರ್ತಿ ಪಡೆದುಕೊಳ್ಳುತ್ತಲೇ, ತನ್ನ ಸ್ವರೂಪವನ್ನು ಹೊಂದಿಸಿಕೊಳ್ಳುತ್ತಲೇ ಬಂದಿದೆ. ಇಂದು ಮರಾಠಿ ಚಲನಚಿತ್ರಕ್ಕಿಂತ ವ್ಯಾವಸಾಯಿಕ ನಾಟಕ ಹೆಚ್ಚು ಓಡುತ್ತದೆ!

ಇದರ ಅನನ್ಯ ಹಾಸ್ಯಪ್ರಜ್ಞೆ, ಸೆಕ್ಯುಲರ್ ಗುಣ, ಶಬ್ದ ಪ್ರಾಧಾನ್ಯತೆ, ಜನಪ್ರಿಯತೆ ಮೊದಲಾದ ಅಂಶಗಳನ್ನೂ ಪ್ರಬಂಧದಲ್ಲಿ ಸಂಕ್ಷಿಪ್ತವಾಗಿ ಚಿತ್ರಿಸಲಾಯಿತು.



## OBITUARY

With deep sorrow, we inform the sad demise of Smt. Lalithamba Rao, beloved wife of our Senior Member Shri S. N. Nagaraja Rao, on April 26, 2026. They have three children - Harish, Jagadish and Sujatha. Having moved to Bangalore in 1991, she was a pillar of support to her family and a well-wisher to all.

Our heartfelt condolences to her family members. May her soul rest in peace.

'ನೇಸರು' ತಿಂಗಳೋಲೆ

ಸಂಪುಟ 44 ಜುಲಾಯಿ 2026 ಸಂಚಿಕೆ 06

# ಗಿಡವಾಗಿ ಬಗ್ಗದ್ದು, ಮರವಾಗಿ ಬಗ್ಗೀತೇ?'



**ಡಾ. ಜ್ಯೋತಿ ಸತೀಶ್**

ಮಕ್ಕಳಿಗೆ ಚಿಕ್ಕದಿರುವಾಗಲೇ ಸತ್ಯ ಹೇಳುವುದನ್ನ ಕಲಿಸಬೇಕು. ಮಕ್ಕಳು ತಪ್ಪು ಮಾಡಿದಾಗ ಪ್ರೀತಿಯಿಂದಲೇ ತಿಳಿ ಹೇಳಲೇಬೇಕು. ಒಂದೇ ಸಮನೆ ಬಯ್ಯೋದು, ಹೊಡೆಯುವುದು ಮಾಡೋದರಿಂದ ಮಕ್ಕಳಲ್ಲಿ ತಮ್ಮಿಂದಾದ ತಪ್ಪನ್ನು ಒಪ್ಪಿಕೊಂಡು, ತಂದೆ ತಾಯಿಯರಲ್ಲಿ ಸತ್ಯವನ್ನು ಹೇಳುವ ಧೈರ್ಯ ಕಮರಿ ಹೋಗುತ್ತದೆ. ನಾವು ಕೋಪದಿಂದ ವರ್ತಿಸಿದಾಗ, ಮಕ್ಕಳಲ್ಲಿ ಹಠದ ಸ್ವಭಾವ ಹುಟ್ಟಿಕೊಳ್ಳುತ್ತದೆ. ಆ ಪ್ರವೃತ್ತಿ ಬೆಳೆಯಕೂಡದು ಮಕ್ಕಳಲ್ಲಿ. ಪ್ರೀತಿಯಿಂದ ತಿಳಿ ಹೇಳಿದಾಗ ಮಕ್ಕಳು ಕ್ರಮೇಣ ಅರ್ಥ ಮಾಡಿಕೊಳ್ಳುತ್ತಾರೆ. ಮಕ್ಕಳನ್ನು ಬೆಳೆಸುವಾಗ, ಪ್ರೀತಿ ಮತ್ತು ಶಿಸ್ತಿನಲ್ಲಿ ಸಮತೋಲನವನ್ನು ನಾವು ಕಾಯ್ದುಕೊಳ್ಳಬೇಕಾಗುತ್ತದೆ. ಅತಿಯಾದ ಪ್ರೀತಿ ಮತ್ತು ತುಂಬಾ ಕಟ್ಟುನಿಟ್ಟು ಎರಡೂ ಅವರ ಬೆಳವಣಿಗೆಗೆ ಒಳ್ಳೆಯದಲ್ಲ. ಇವತ್ತಿನ ಮಕ್ಕಳಿಗೆ ನಾವು ಕೊಡಬೇಕಾದುದು ಹಾಗೆ ತುಂಬಾ ಮುಖ್ಯವಾದುದು ಅಂದರೆ ಅದು 'ನಮ್ಮ ಸಮಯ'. ನಾವು ನಮ್ಮ ನಮ್ಮ ಫೋನುಗಳನ್ನು ಬದಿಗಿಟ್ಟು, ಅವರೊಂದಿಗೆ ಆಟವಾಡಬೇಕು. ಅವರ ಮಾತುಗಳನ್ನು ಕೇಳಬೇಕು. ನನ್ನ ಪ್ರತಿಯೊಂದು ಭಾವನೆಗಳಿಗೆ ನಮ್ಮ ಅಪ್ಪ ಅಮ್ಮ ಸ್ಪಂದಿಸುತ್ತಾರೆ ಅನ್ನೋದನ್ನು ಮನದಟ್ಟು ಮಾಡಬೇಕು. ಹಿರಿಯರು 'ಮನೆಯೇ ಮೊದಲ ಪಾಠಶಾಲೆ, ತಾಯಿಯೇ ಮೊದಲ ಗುರು' ಎಂದಿದ್ದಾರೆ. ಯಾಕೆಂದರೆ ಮಕ್ಕಳು ತಂದೆ ತಾಯಿಯನ್ನು ನೋಡಿಯೇ ಮೊದಲು ಕಲಿಯುವುದು. ಮಕ್ಕಳು ನೀವು ಯಾವ ರೀತಿ ಮನೆಯಲ್ಲಿ ವರ್ತಿಸುತ್ತೀರೋ ಅದನ್ನು ಜಾಸ್ತಿ ನೋಡಿ ಕಲಿಯುತ್ತಾರೆ. ಮಕ್ಕಳು ಹೆಚ್ಚು ಸಮಯ ಕಳೆಯುವ ವ್ಯಕ್ತಿಯಿಂದಲೇ ಹೆಚ್ಚು ಕಲಿಯುತ್ತಾರೆ. ನೀವು ಕೋಪ ನಿಯಂತ್ರಿಸಿದರೆ, ಸುಳ್ಳು ಹೇಳದಿದ್ದರೆ, ಹಿರಿಯರನ್ನು ಗೌರವಿಸುವುದು, ಪ್ರಾಣಿ ಪಕ್ಷಿಗಳನ್ನು ಪ್ರೀತಿಸುವುದು, ಪುಸ್ತಕಗಳನ್ನು ಓದುವ ಹವ್ಯಾಸ ಇಟ್ಟುಕೊಂಡಿದ್ದರೆ, ಮಕ್ಕಳು ಕೂಡ ಅದನ್ನೇ ಪಾಲಿಸುತ್ತಾರೆ.

ಮಕ್ಕಳು ಆಟವಾಡುವಾಗ ಬೀಳೋದು ಸಹಜ. ತಕ್ಷಣ ಪ್ರತಿಕ್ರಿಯಿಸಬೇಡಿ. ಬೀಳಲಿ, ಎದ್ದು ಕಲಿಯಲಿ. ಪರವಾಗಿಲ್ಲ ಮತ್ತೆ ಪ್ರಯತ್ನಿಸು ಎನ್ನುವ ಧೈರ್ಯ ಕೊಡಿ. ಇದರಿಂದ ಅವರಲ್ಲಿ ಆತ್ಮವಿಶ್ವಾಸ ಬೆಳೆಯುತ್ತದೆ. ದಿನಕ್ಕೆ 1 – 2 ಗಂಟೆಗಿಂತ ಹೆಚ್ಚು ಸ್ಕ್ರೀನ್ ಟೈಮ್ ಬೇಡ. ಆಟದ ಮೈದಾನ, ಪುಸ್ತಕ ಓದುವುದು, ಕುಟುಂಬದ ಜೊತೆ ಊಟ ಇತ್ಯಾದಿ. ಈ ಅಭ್ಯಾಸಗಳು ಚಿಕ್ಕ ವಯಸ್ಸಿನಲ್ಲೇ ರೂಢಿಯಾಗಬೇಕು. ಮಕ್ಕಳ ಪ್ರಯತ್ನಕ್ಕೆ ಸದಾ ಮೆಚ್ಚುಗೆಯನ್ನು ನೀಡಿ ಅವರನ್ನು ಇನ್ನಷ್ಟು ಪ್ರೋತ್ಸಾಹಿಸಬೇಕು. ಅವರ ಪ್ರತಿ ನಡತೆಯನ್ನು ತಿದ್ದಬೇಕು. ಯಾವುದು ತಪ್ಪು, ಯಾವುದು ಸರಿ ಅನ್ನೋದನ್ನು ಮನವರಿಕೆ ಮಾಡಿಸಬೇಕು. ಮಕ್ಕಳನ್ನು ಪದೇ ಪದೇ ಬೇರೆಯವರ ಮಕ್ಕಳೊಂದಿಗೆ ಹೋಲಿಸಿ ಮಾತನಾಡಬೇಡಿ. ಮಕ್ಕಳು ಮಣ್ಣಿನಂತೆ. ನೀವು ಹೇಗೆ ರೂಪಿಸುತ್ತೀರೋ ಹಾಗೆ ಆಗುತ್ತಾರೆ.

ಆದರೆ ರೂಪಿಸುವಾಗ ಜಗ್ಗದೆ, ಮುರಿಯದೆ ಮಾಡಬೇಕು. 'ಗಿಡವಾಗಿ ಬಗ್ಗದ್ದು, ಮರವಾಗಿ ಬಗ್ಗೀತೇ? ಎಂದು ಹಿರಿಯರು ಹೇಳಿದ್ದಾರೆ. ಚಿಕ್ಕ ವಯಸ್ಸಿನಲ್ಲೇ ಮಕ್ಕಳಿಗೆ ಒಳ್ಳೆಯ ಸಂಸ್ಕಾರ, ಶಿಸ್ತು ಕಲಿಸಬೇಕು. ದೊಡ್ಡವರಾದ ಮೇಲೆ ಬದಲಾಯಿಸುವುದು ಕಷ್ಟ. ಮಗುವನ್ನು ಬೆಳೆಸುವುದು ಗಿಡ ಬೆಳೆಸಿದ ಹಾಗೆ– ಅದಕ್ಕೆ ಸಂಸ್ಕಾರವೆಂಬ ನೀರನ್ನು ಸದಾ ಎರೆಯುತ್ತಿರಬೇಕು. ಬಿಸಿಲು ಮಳೆಯಿಂದ ರಕ್ಷಿಸುವಂತೆ, ಕೆಟ್ಟ ಪ್ರಭಾವಗಳಿಂದ ಮಕ್ಕಳನ್ನು ದೂರವಿಡಬೇಕು. ಬಾಹ್ಯ ಜಗತ್ತಿನ ಆಕರ್ಷಣೆಗೆ ಒಳಗಾಗಿ ಮಕ್ಕಳ ಮನಸ್ಸು ಕೆಟ್ಟದು ಮತ್ತು ಒಳ್ಳೆಯದರ ನಡುವೆ ಹೊಯ್ದಾಡುವ ಸಂಭವವಿದೆ. ಅದಕ್ಕೆ ಆಗಾಗ ಮಕ್ಕಳ ಮನಸ್ಸಿನಲಿರುವ ಕಳೆಯನ್ನು ತೆಗೆಯುತ್ತಿರಬೇಕು. ಮಕ್ಕಳನ್ನು ನಿಮ್ಮ ಪ್ರತಿಷ್ಠೆಯ ಸಂಕೇತವನ್ನಾಗಿ ಬೆಳೆಸಬೇಡಿ. ಅವರ ಬೆಳವಣಿಗೆಯಲ್ಲಿ ಯಾವುದೇ ರೀತಿಯ ಬಲವಂತಿಕೆ ಇರಬಾರದು. ಮಕ್ಕಳೇ ನಿಮ್ಮ ಆಸ್ತಿ ಅನ್ನುವ ಹಾಗೆ ಬೆಳೆಸಿರಿ. ಮಕ್ಕಳಿಗಾಗಿ ನೀವು ಎಷ್ಟೇ ಕಷ್ಟಪಟ್ಟು ಆಸ್ತಿಯನ್ನು ಸಂಪಾದಿಸಿದ್ದರೂ, ಮಕ್ಕಳಲ್ಲಿ ಮಾತ್ರ ನಿಮ್ಮ ಸ್ವಪ್ರಯತ್ನದಿಂದ ಆಸ್ತಿ ಸಂಪಾದಿಸುವಂತೆ ಪ್ರೇರೇಪಿಸಬೇಕು. ಆಗ ಅವರಿಗೆ ನೀವು ಪಟ್ಟ ***(ಪುಟ 11ಕ್ಕೆ...)***

ಗೌ. ಸಂಪಾದಕರು
**ಡಾ. ಜ್ಯೋತಿ ಸತೀಶ್**

❖ ❖ ❖

ಸಂಪಾದಕ ಮಂಡಳಿ:
**ಡಾ. ಮಂಜುನಾಥ್**
**ಕೆ. ಮಂಜುನಾಥಯ್ಯ**
**ಕೆ. ಕಮಲ**
**ನಾರಾಯಣ ನವಿಲೇಕರ್**
**ಗಣಪತಿ ಶಂಕರಲಿಂಗ**

❖ ❖ ❖

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ.
– ಸಂ.

The views expressed by the contributors in this journal are theirs and not of the Association and the Association is not in anyway responsible for the same.
- Ed.

❖ ❖ ❖

ಸಂಪರ್ಕ ವಿಳಾಸ:
**ನೇಸರು**
ಮೈಸೂರು ಅಸೋಸಿಯೇಷನ್
393, ಭಾವುದಾಜಿರಸ್ತೆ, ಮಾಟುಂಗ
ಮುಂಬಯಿ – 400 019.
✆ 24037065

Email:
mysoreassociation.mumbai@gmail.com
Website:
www.mysoreassociation.in

# ಪ್ರವಾಸ ವೈವಿಧ್ಯ

✍ ಡಾ. ಸುಮಾ ದ್ವಾರಕಾನಾಥ್



## ಅಮೆರಿಕ ಪ್ರವಾಸ ಕಥನ

ಮುಂದಿನ ಪಯಣ ಶುರು ಮಾಡುವ ಮುಂಚೆ, ನ್ಯೂಯಾರ್ಕ್‌ನ ಇನ್ನೊಂದು ವಿಶೇಷವನ್ನು ಹೇಳಲೇ ಬೇಕು. ನ್ಯೂಯಾರ್ಕ್‌ನಲ್ಲಿ ಪ್ರವಾಸಿ ತಾಣಗಳನ್ನು ನೋಡಿದ ಮೇಲೆ ನಮ್ಮನ್ನು ಬೆಳಗ್ಗೆ ಸಾಯಂಕಾಲ ಬ್ರೂಕ್ಲಿನ್ ಬ್ರಿಡ್ಜ್ ನೋಡಲು ಕರೆದುಕೊಂಡು ಹೋಗಿದ್ದರು. ಅವರ ವಿವರಣೆ ಅರ್ಥವಾಗಿರಲಿಲ್ಲವೋ ಏನೋ, ಸುಮ್ಮನೆ ನೋಡಿ ಬಂದಿದ್ದೆವು. ಈಚೆಗೆ ಡಾ॥ ಕರ್ಜಗಿ ಅವರ ಮಾತಿನಲ್ಲಿ ಈ ಬಗ್ಗೆ ಕೇಳಿದಾಗ ಬರೆಯಲೇ ಬೇಕೆನಿಸಿತು. ಹಾಗಾಗಿ ಈ ವಿವರ.

ಬ್ರೂಕ್ಲಿನ್ ಬ್ರಿಡ್ಜ್ ಒಂದು ಸಾಂಪ್ರದಾಯಿಕ ಕೇಬಲ್ ತೂಗು ಸೇತುವೆ .ಅಂದರೆ ಒಂದು ಅಥವಾ ಅದಕ್ಕಿಂತ ಹೆಚ್ಚಿನ ಎತ್ತರದ ಗೋಪುರಗಳಿಗೆ ಉಕ್ಕಿನ ಬಲಿಷ್ಠ ತಂತಿಗಳನ್ನು ನೇರವಾಗಿ ಜೋಡಿಸಿ ಅವುಗಳ ಸಹಾಯದಿಂದ ಸೇತುವೆಯ ಕೆಳಭಾಗವನ್ನು ತೂಗುಹಾಕಿ ನಿರ್ಮಿಸಿದ ಜಗತ್ಪ್ರಸಿದ್ಧ ಸೇತುವೆ. ಇದು ಮ್ಯಾನ್ಹಟನ್ ಮತ್ತು ಬ್ರೂಕ್ಲಿನ್ ನಗರಗಳನ್ನು ಜೋಡಿಸಲು ಸುಮಾರು 14 ದೀರ್ಘ ವರ್ಷಗಳಲ್ಲಿ ಸಂಪೂರ್ಣಗೊಂಡ ಸೇತುವೆ. ಇದರ ಉದ್ದ 6016 ಅಡಿ, ಅಗಲ 1595 ಅಡಿ ಇದ್ದು ಸುಮಾರು 135 ಅಡಿ ನೀರಿನ ಮೇಲಿದೆ.



ಇದರ ದುರಂತ ಕಥೆಯನ್ನು ಕೆಲವೇ ಮಾತುಗಳಲ್ಲಿ ಹೇಳುತ್ತೇನೆ. ಜಾನ್ ಅಗಸ್ಟಸ್ ರೋಬ್ಲಿಂಗ್ ಎನ್ನುವ ಒಬ್ಬ ಜರ್ಮನ್ ಇಂಜಿನಿಯರ್‌ನ ಕನಸಿನ ಕೂಸು. 1869ನೆಯ ಇಸವಿಯಲ್ಲಿ ಆರಂಭವಾದ ಸೇತುವೆಯ ಕೆಲಸದಲ್ಲಿ ಅಕಸ್ಮಾತ್ತಾಗಿ ರೋಬ್ಲಿಂಗ್‌ನ ಕಾಲಿನ ಮೇಲೆ ಕಬ್ಬಿಣ ಬಿದ್ದು ಅವನು ಸಾಯುತ್ತಾನೆ. ಅವನ ಮಗ ಅಪ್ಪನ ಕೆಲಸ ಮುಂದುವರೆಸಲು ಹೋದಾಗ ಅಲ್ಲಿ ಹೊರಸೂಸಿದ ವಿಷಮ ಗಾಳಿಯಿಂದ ಮಗನೂ ತೀವ್ರ ಖಾಯಿಲೆಗೆ ತುತ್ತಾಗಿ ಆಸ್ಪತ್ರೆಯಲ್ಲಿ ನಿರ್ವಿಣ್ಣನಾಗಿ ಹಾಸಿಗೆಗೆ ಸೇರುತ್ತಾನೆ. ಅವನು ಪಾರ್ಶ್ವ ವಾಯುವಿಗೆ ತುತ್ತಾದಾಗ ಅವನ ಹೆಂಡತಿ ಸುಮಾರು 11 ವರ್ಷ ಅವನ ಕೈ ಬೆರಳುಗಳ (ಅಲ್ಲಾಡಿಸುವಿಕೆ) ಸೂಚನೆಯಿಂದಲೇ ಅರ್ಧ ನಿಂತಿರುವ ಸೇತುವೆಯ ಕೆಲಸವನ್ನು ಮುಗಿಸುತ್ತಾಳೆ. 1883ನೆಯ ಇಸವಿ ಮೇ 24ರಂದು ಸೇತುವೆ ಸಾರ್ವಜನಿಕರಿಗೆ ತೆರೆಯುತ್ತದೆ. ಕುಟುಂಬದ ಮೂರು ಸದಸ್ಯರ ಅಪೂರ್ವ ಮಹತ್ವಾಕಾಂಕ್ಷೆ ಯಿಂದ ಪೂರ್ಣಗೊಂಡ ಸೇತುವೆ ಇಂದಿಗೂ ತ್ಯಾಗದ ಹೆಮ್ಮೆಯ ಸಂಕೇತವಾಗಿ ನಿಂತಿದೆ.

ಇಲ್ಲಿಗೆ ನಮ್ಮ ಪ್ಯಾಕೇಜ್ ಪ್ರವಾಸ ಮುಗಿದಿದ್ದರಿಂದ ನಾವು ಇನ್ನೆಂಟು ದಿನ ಬಿಟ್ಟು ಟಿಕೆಟ್ ಮಾಡಿಸಿದ್ದೆವು. ನ್ಯೂಜೆರ್ಸಿಯಲ್ಲಿ ಕಸಿನ್ ಇದ್ದುದರಿಂದ ಅವನಲ್ಲಿಗೆ ನಾವು ಮೂರೂ ಜನವೂ ಹೊರಟೆವು. ನಾವು ಬುಕ್ ಮಾಡಿದ ಟ್ಯಾಕ್ಸಿ ಬರದೆ , ಕೊನೆಗೆ ಅವನೇ ಮಾಡಬೇಕಾಯ್ತು. ಸುಮಾರು ಎರಡು ಗಂಟೆ ಪಯಣಿಸಿ ಅವನ ಮನೆ ತಲುಪಿದೆವು. ದೊಡ್ಡ ಬಂಗಲೆ ಹಿಂದೆ ಮುಂದೆ ದೊಡ್ಡ ಕಾಂಪೌಂಡು. ಅವನ ಅಣ್ಣನೂ ಅವನ ಮನೆಗೆ ಬಂದದ್ದರಿಂದ ಅವನ ಭೇಟಿಯೂ ಆಯಿತು. ನಾವು ಅವನ ಮನೆ ತಲುಪಿದಾಗ ಸುಮಾರು 1.30 ಆಗಿತ್ತು. ಹೊಟ್ಟೆ ಚುರುಗುಟ್ಟುತ್ತಿತ್ತು. ಅವನು ನಮ್ಮ ಯೋಗಕ್ಷೇಮ ವಿಚಾರಿಸಿದ ಮೇಲೆ, ಊಟಕ್ಕೇನಪ್ಪಾ ವ್ಯವಸ್ಥೆ ಅನ್ನಿಸಿತು. ಸುಮಾರು 2ಗಂಟೆಯ ಹೊತ್ತಿಗೆ

ಅವನ ಹೆಂಡತಿ ಮಹಡಿಯ ಮೇಲಿಂದ ಇಳಿದು ಬಂದಳು. ಅವಳು ವರ್ಕ್ ಫ್ರಮ್ ಹೋಮ್ ಮಾಡುತ್ತಿದ್ದುದರಿಂದ, ಮುಂಚೆಯೇ ಅಡುಗೆ ಮುಗಿಸಿದ್ದಳು. ಬಂದವಳೇ ಟೇಬಲ್ ತುಂಬಾ ಹುಳಿ, ಸಾರು, ಗೊಜ್ಜು ಅಂತ ಅಡುಗೆ ತಂದಿಟ್ಟಳು. ತೀರ ಹಸಿವಾದ್ರಿಂದ ಮತ್ತು ಮನೆ ಊಟ ಮಿಸ್ ಮಾಡಿದ್ರಿಂದ ಗಡದ್ದು ತಿಂದೆವು. ಆಮೇಲೆ ಮನೆ ನೋಡುವ ಚಪಲ. ವಿಶಾಲವಾದ ಡೈನಿಂಗ್ ಕಮ್ ಡ್ರಾಯಿಂಗ್ ರೂಮ್, ದೊಡ್ಡ ಅಡುಗೆ ಮನೆ, ಪಕ್ಕದಲ್ಲೇ ಒಂದು ಮಿನಿ ಡಿಪಾರ್ಟ್ಮೆಂಟಲ್ ಸ್ಟೋರ್ಸ್ ನ ಹಾಗೆ ಉಗ್ರಾಣ, ಮುಂದೆ ಬಂದರೆ ಟಿ.ವಿ., ಎಲೆಕ್ಟ್ರೋನಿಕ್ ಡಿವೈಸ್ ಗಳ ದೊಡ್ಡ ಹಾಲ್. ಹಿಂದೆ ದೊಡ್ಡ ಅಂಗಳ. ತುಳಸೀ ಕಟ್ಟೆ, ಕೆಲವು ಸಲ ನವಿಲುಗಳೂ ಅಲ್ಲಿ ಬರುತ್ತಿರುತ್ತವಂತೆ. ಮುಂದುಗಡೆ ಬಾಗಿಲ ಪಕ್ಕ ಒಂದು ಸಣ್ಣ ರೂಮ್, ಅಲ್ಲಿ ಚಳಿಗಾಲದ ಓವರ್ ಕೋಟ್ ಗಳ ತಾಣ. ಪಕ್ಕದಲ್ಲೇ ಒಂದು ದೊಡ್ಡ ಗ್ಯಾರೇಜ್ , ಅಲ್ಲಿ ಎರಡು ಮೂರು ಕಾರುಗಳನ್ನು ನಿಲ್ಲಿಸಬಹುದಾದಷ್ಟು ದೊಡ್ಡ ಜಾಗದ ಜೊತೆಗೆ ನೀರಿನ ಬಾಟ್ಲಿಗಳ ಕ್ರೇಟ್‌ಗಳು. ನಾವು ಇಷ್ಟೆಲ್ಲಾ ನೋಡಿ ವಿಸ್ಮಯ ಪಡುತ್ತಿರುವಾಗಲೇ ಮಹಡಿ ಮೇಲೆ ಕರೆದೊಯ್ದು. ಅಲ್ಲಿ ಒಟ್ಟು 5 ದೊಡ್ಡ ಮಲಗುವ ಕೋಣೆಗಳು. ಒಂದರಲ್ಲಿ ಪೂರ್ತಿ ದೇವರ ಕೋಣೆ . ಅಲ್ಲಿಗೆ ಎಲ್ಲರೂ ಹೋಗುವ ಹಾಗಿಲ್ಲ. ದೇವರುಗಳ, ಸಾಲಿಗ್ರಾಮದ ಮತ್ತು ದೇವರ ಉಪಕರಣಗಳೇ ತುಂಬಿರುವ ಮಡಿ ಸಾಮ್ರಾಜ್ಯ. ನಮ್ಮ ಊರಿನಲ್ಲೇ ಕಾಣದ ಅಪರೂಪದ ದೃಶ್ಯ. ಅವನ ಎರಡು ಹೆಣ್ಣು ಮಕ್ಕಳಿಗೂ ಎರಡು ರೂಮ್ . ಒಬ್ಬ ಮಗಳು ನ್ಯೂಯಾರ್ಕ್ ನಲ್ಲಿದ್ದುದರಿಂದ ನಮಗೆ ಆ ರೂಮ್ ಬಿಟ್ಟುಕೊಡಲಾಗಿತ್ತು. ಅಮೆರಿಕದಲ್ಲಿ ಅಷ್ಟು ದೊಡ್ಡ ಮನೆ ನೋಡಿ ಖುಷಿಯಾಯ್ತು. ಇವರ ಮನೆ ಎದುರಿಗೇ ಒಬ್ಬರ ಮನೆಯಲ್ಲಿ ಕಾರು ನಿಲ್ಲಿಸುವ ಜಾಗದಲ್ಲಿ ಒಂದು ದೊಡ್ಡ ದೋಣಿ ಕಟ್ಟಿದ್ದು ನೋಡಿ ಆಶ್ಚರ್ಯವಾಯಿತು. ಕಾರಿನ ತರಹವೇ ಬೋಟ್ ಸಹ ಬಳಸುತ್ತಾರೆಂದು ತಿಳಿಯಿತು.

ನಮಗೆ ಅಂದು ಸಂಜೆ ಪ್ರಿನ್ಸನ್ ವಿಶ್ವವಿದ್ಯಾಲಯವನ್ನು ತೋರಿಸಿಕೊಂಡು ಬಂದ. ಮಾರನೆ ದಿನ ಪುತ್ತಿಗೆ ಮಠಕ್ಕೆ ಅವನ ಹೆಂಡತಿ ವಿದ್ಯಾ ಕರೆದುಕೊಂಡು ಹೋದಳು. ಅಲ್ಲಿ ಸಹ ಚರ್ಚಿಗೆ ಹೋಗುವವರು ಕಡಿಮೆಯಾದ್ರಿಂದ, ಅದನ್ನು ಬೇರೆಯವರಿಗೆ ಮಾರಿಬಿಡುತ್ತಾರಂತೆ . ಹಾಗಾಗಿ ನಮ್ಮವರು ಸುಲಭವಾಗಿ ಖರೀದಿಸಲು ಅನುಕೂಲವಾಗಿದೆ. ಮಠಧ ಮುಂದೆಯೇ ಏಸುಕ್ರಿಸ್ತನ ತರಹದಲ್ಲಿ, ಪುತ್ತಿಗೆ ಸ್ವಾಮಿಗಳ ದೊಡ್ಡ ಪ್ರತಿಮೆಯನ್ನು ಸ್ಥಾಪಿಸಲಾಗಿದೆ. ಒಳಗಂತೂ ಉಡುಪಿಯ ವಾತಾವರಣವೇ. ನಾವು ಹೋಗಿದ್ದಾಗ, ಡಾ॥ ವಿದ್ಯಾಭೂಷಣರು ಬಂದಿದ್ದರು. ಅಲ್ಲಿಯವರ ಸಂಭ್ರಮ ಹೇಳತೀರದು. ಇಲ್ಲಿ ಸಿಗದ ಹೂಗಳು ಅಲ್ಲಿ ರಾರಾಜಿಸುತ್ತಿದ್ದವು. ಹೆಂಗಸರು ಹೂ ಕಟ್ಟುತ್ತಾ ಹಾಡುತ್ತಿದ್ದ ದೃಶ್ಯ ನಮ್ಮನ್ನು ಬೆರಗು ಗೊಳಿಸಿತು. ಮಾಡರ್ನ್ ಅಡುಗೆ ಮನೆಯಲ್ಲಿ ಉಡುಪಿ ಊಟ, ಎಲ್ಲರೂ ನೆಲದ ಮೇಲೆ ಕೂತು ಊಟ, ಎಲೆಗೋಮೆ, ಸ್ವಯಂಪ್ರೇರಿತರಾಗಿ ಸ್ವಚ್ಛತೆ ಕಾಪಾಡಿದ ಕ್ರಮ ನೋಡಿ ಖುಷಿಯಾಯಿತು.

ಅಂದು ಸಂಜೆ ಹತ್ತಿರದಲ್ಲೇ ಇದ್ದ ಬ್ರಿಜ್ ವಾಟರ್ ಬಾಲಾಜಿ ಮಂದಿರಕ್ಕೆ ಕರೆದುಕೊಂಡು ಹೋದ. 1998 ರಲ್ಲಿಕಟ್ಟಿದ ಮಂದಿರ ಸುಮಾರು 11000 ಚದರ ಅಡಿ ಇದ್ದು , ಎಲ್ಲಾ ದೇವರುಗಳ ಸೂಪರ್ ಕಾಂಪ್ಲೆಕ್ಸ್ ಆಗಿದೆ. ವ್ಯವಸ್ಥಿತವಾದ ಕ್ಯಾಂಟೀನ್ ಸಹ ಇದೆ.

ಮಾರನೆದಿನ ನಾವು, ಡಲಾಸ್‌ನಲ್ಲಿರುವ, ನನ್ನ ತಂಗಿಯ ಮಗಳ ಮನೆಗೆ ಹೋದೆವು. ಅಲ್ಲಿ ಇಳಿದಾಗ ರಾತ್ರಿ 8.30 ಗಂಟೆ, ಆದರೆ ಸೂರ್ಯನ ಬಿಸಿಲು ಸಂಜೆ 6ಗಂಟೆಯಂತೆ ಮುಖಕ್ಕೆ ರಾಚುತ್ತಿತ್ತು. ಅವರು ಮಾಲ್ ಗೆ ಹೋಗಿದ್ದರಿಂದ ನಾವು ಅರ್ಧಗಂಟೆ ಕಾಯಬೇಕಾಗಿತ್ತು. ಆಮೇಲೆ ಬಂದು ಕರೆದುಕೊಂಡು ಹೋದರು.


ಮಾರನೆದಿನ ಅಲ್ಲಿದ್ದ ಒಂದು ಆರ್ಟ್ ಗ್ಯಾಲರಿಗೆ ಹೋದರೆ ಬರೀ ನಮ್ಮ ಭಾರತದ , ಮೈಸೂರು ರಾಜರ ಸುಮಾರು ಕಲಾಕೃತಿಗಳು ಕಂಡು ಬಂದವು. ಮುಂದೆ ಇಡೀ ಒಂದು ಹೈವೆ ಮೇಲೆ ಮಕ್ಕಳಿಗೆ ಮತ್ತು ದೊಡ್ಡವರಿಗಾಗಿ ಗಾರ್ಡನ್ ನಿರ್ಮಿಸಿದ್ದಾರೆ. ಸುತ್ತಲೂ ಇಲ್ಲಿಯ ಹಾಗೇ ದೊಡ್ಡ ದೊಡ್ಡವ್ಯಾನ್ ಗಳಲ್ಲಿ ಪಾನಿ ಪುರಿ, ಭೇಲ್ಪುರಿ ಮಾರುತ್ತಿದ್ದುದು ಕಂಡು ಮುಂಬೈ ನೆನಪಾಯಿತು. ಕಾಂಕ್ರೀಟ್ ನೆಲದಿಂದಲೇ ಚಿಮ್ಮುವ ಸಣ್ಣ ಸಣ್ಣ ಕಾರಂಜಿಗಳನ್ನು ನೋಡಿ ನಾವೇ ಮಕ್ಕಳ ಹಾಗೆ ಅದರ ಜೊತೆ ಆಡುವಂತಾಯ್ತು.

ಮುಂದೆ ಜಾನ್ ಎಫ್ ಕೆನಡಿ ಯ ಹತ್ಯೆಯಾದ ರಸ್ತೆಯನ್ನು ನೋಡಿದೆವು. ಅಲ್ಲಿ ಆ ಸಮಯದಲ್ಲಿ ಫೋಟೋ ತೆಗೆದಿದ್ದ ಫೋಟೋಗ್ರಾಫರ್ ಅವತ್ತಿಗೂ ಫೋಟೋ ಹಿಡಿದು ಕೂತಿದ್ದನ್ನು ನೋಡಿದೆವು.

ಮಾರನೆದಿನ ಅವರಿಬ್ಬರೂ ಓದಿದ ಅರ್ಲಿಂಗ್ಟನ್ ಯೂನಿವರ್ಸಿಟಿಯನ್ನು ನೋಡಿಕೊಂಡು ಮುಂದೆ ಫೋರ್ಟ್ ವರ್ತ್ ಗೆ ಬಂದೆವು. ದಾರಿಯಲ್ಲಿ ವಾಟರ್ ಗಾರ್ಡನ್ ಎಂಬ ಮೂರು ವಿಧದ ಕೊಳಗಳನ್ನು ನೋಡಿದೆವು. ಕ್ವೈಟ್ ಫೂಲ್, ಏರೇಟಡ್ ಫೂಲ್ ಮತ್ತು ಆಕ್ಟೀವ್ ಫೂಲ್. ಆದರೆ ಪ್ರವಾಸೀ ಆಕರ್ಷಣೆಯುಳ್ಳದ್ದು ಎಂದರೆ ಆಕ್ಟೀವ್ ಫೂಲ್. ತಳದಲ್ಲಿ ಕೊಳ ವಿದ್ದು 38 ಅಡಿಯ ಮೇಲಿಂದ ಸುತ್ತಲೂ ಹಂತ ಹಂತವಾಗಿ ಬೀಳುವ ಸರಣಿ ಜಲಪಾತ. ಕೆಳಗೆ ಹೋಗಲು ನಡುನಡುವೆ ದೊಡ್ಡ ಮೆಟ್ಟಿಲುಗಳು . ಬಿಸಿಲಧಗೆಯನ್ನು ತಡೆಗಟ್ಟಲು ಹೀಗೆ ಮಾನವ ನಿರ್ಮಿತ ಜಲಪಾತ ಮಾಡಿದ್ದಾರೆ. ಇದನ್ನು ಕೂಲಿಂಗ್ ಓಯಸಿಸ್ ಎಂದೂ ಕರೆಯುತ್ತಾರೆ.

ಫೋರ್ಟ್ ವರ್ತ್ ನ ಇನ್ನೊಂದು ಜೀವಂತ ಕಥೆಯೆಂದರೆ ದನಗಳ ಜಾತ್ರೆಯ ಶೋ. ಬೆಳಗ್ಗೆ 11.30 ಗಂಟೆ ಮತ್ತು ಸಂಜೆ 4 ಗಂಟೆಗೆ ಸರಿಯಾಗಿ ದಿನಕ್ಕೆ ಎರಡು ಸಲ ಟೆಕ್ಸಾಸ್‌ನ ಉದ್ದಕೊಂಬಿನ ದನಗಳ ಭವ್ಯವಾದ ಮೆರವಣಿಗೆ ಬೀದಿಗಿಳಿಯುತ್ತದೆ. ಅದನ್ನು ನೋಡಲು ರಸ್ತೆಯ

ಅಕ್ಕ ಪಕ್ಕ ಅಸಾಧ್ಯ ಜನ ಸಂದಣಿ ಸೇರುತ್ತದೆ. ಅಲ್ಲಿಯ ಕೌಬಾಯ್ ಗಳು ಕುದುರೆಯೇರಿ ಪಾಳೆಗಾರರಂತೆ ತಮ್ಮಕಚ್ಚಾ ಶಕ್ತಿಯನ್ನು ಪ್ರದರ್ಶಿಸುತ್ತಾ ನಿಧಾನವಾಗಿ ಸಾಗುತ್ತಾರೆ. ಅದನ್ನು ನೋಡುವುದೇ ಒಂದು ಚಂದ.




ಮರುದಿನ 4ನೆಯ ಜುಲೈ ಅಮೆರಿಕಾದ ಸ್ವಾತಂತ್ರ್ಯ ದಿನವಾಗಿತ್ತು ಇಲ್ಲಿಯ ಹಾಗೆ ಶಾಲೆ, ಕಾಲೇಜುಗಳಲ್ಲಿ ಆಚರಣೆಯೇನೂ ಕಾಣಲಿಲ್ಲ, ಎಲ್ಲರ ಮನೆಯ ಮುಂದೆ ಧ್ವಜವನ್ನೇನೋ ಹಾರಿಸಿದ್ದರು. ಸಂಜೆ ಹೊತ್ತಿಗೆ ಮೈದಾನದಲ್ಲಿ ಜನಸಂದಣಿ ಸೇರಲು ಪ್ರಾರಂಭವಾಯಿತು. ಇಲ್ಲಿಯ ಜಾತ್ರೆಗೆ ಜನ ಸೇರುವಂತೆ ಚಾಪೆ, ಬೆಡ್ಶೀಟು, ಪುಟ್ಟ ಕುರ್ಚಿಗಳನ್ನು ತುಂಬಿ ಕೊಂಡು ಕಾರಿನಲ್ಲಿ ಜನ ಬಂದಿಳಿಯಲಾರಂಭಿಸಿದರು. ನಾವೂ ಅವರ ನಡುವೆ ಜಾಗ ಮಾಡಿಕೊಂಡು ಕೂತೆವು. ಸಂತೆಯಲ್ಲಿದ್ದಂತೆ ಆಟಿಕೆಗಳ, ತಿನಿಸಿನ ಮಾರಾಟವೂ ಶುರುವಾಯಿತು. ಜಗತ್ತಿನಲ್ಲಿ ಎಲ್ಲೇ ಹೋದರೂ ಮನುಷ್ಯ ಸ್ವಭಾವ ಒಂದೇ ಎನಿಸಿತು. ಕತ್ತಲಾಗು ತ್ತಿದ್ದಂತೆ ಆಕಾಶದಲ್ಲಿ ವಿವಿಧ ಪಟಾಕಿಗಳ ಪ್ರದರ್ಶನ ಶುರು ವಾಯಿತು. ಸುಮಾರು ಎರಡು ಗಂಟೆ ಕಾಲ ಮನಸೋ ಇಚ್ಛೆ ನಕ್ಕು ನಲಿದು ಮನೆಗೆ ಬಂದೆವು. ಅವರ ಸ್ವಾತಂತ್ರ್ಯೋತ್ಸವ ಆಚರಣೆಯನ್ನು ನೋಡಿದ ಅನುಭವವಾಯ್ತು.

ಮುಂದೆ ಹ್ಯೂಸ್ಟನ್‌ಗೆ ಪಯಣ. ಅಲ್ಲಿ ನನ್ನ ತಂಗಿ ಮಗ ಕಾಯುತ್ತಿದ್ದ. ಡಲಾಸ್‌ನಿಂದ 6 ಗಂಟೆ ಪಯಣ. ತಂಗಿಯ ಸೊಸೆಗೆ ಉಡಿ ತುಂಬ ಬೇಕಾದ್ದರಿಂದ ಎಲ್ಲಾ ತಯಾರು ಮಾಡಿಕೊಂಡು ಹೋಗಿದ್ದೆವು. ಅಲ್ಲಿಯ ವಿಶೇಷವೇನೆಂದರೆ, ಒಂದು ಇಡೀ ರಸ್ತೆಯಲ್ಲಿ ಒಂದಾದಮೇಲೊಂದು ಭಾರತೀಯ ಅಧ್ಯಾತ್ಮಮಂದಿರಗಳ ಪರಿಚಯ. ಉಡುಪಿ ಮಠ, ಚಿನ್ಮಯ ಮಿಷನ್, ಗುರುದ್ವಾರ, ಇಸ್ಕಾನ್ ಟೆಂಪಲ್, ಹೀಗೇ ಹತ್ತು ಹಲವು. ನಮಗಂತೂ ಆಶ್ಚರ್ಯ, ಇಷ್ಟು ಧಾರ್ಮಿಕ ಸಂಘ ಸಂಸ್ಥೆಗಳಿಗೆ ಅಲ್ಲಿ ಜಾಗ ಕೊಟ್ಟಿದ್ದಾರಲ್ಲಾ ಅಂತ. ಅಲ್ಲೂ ಅದೇ ಸಮಸ್ಯೆ, ಚರ್ಚಿಗೆ ಹೋಗುವ ಜನ ಕಮ್ಮಿ. ಹಾಗಾಗಿ ಬೇರೆ ಧರ್ಮಗಳು ಚೆನ್ನಾಗಿ ಹರಡಿಕೊಂಡಿವೆ. ಹಾಗೇ ಅಲ್ಲಿಯ ಮಹಾರಾಜ ಭೋಗ್ ನಲ್ಲಿ ಊಟ ಮಾಡಿಕೊಂಡು ಭವ್ಯವಾದ ಸ್ವಾಮಿ ನಾರಾಯಣ ಮಂದಿರಕ್ಕೆ ಹೋದೆವು. ಸಂಜೆ ಕಡಲ ತೀರದ kemah boardwalk (amusement park) ನೋಡಲು ಹೋದೆವು. ಅದೊಂದು ಹಳೆಯ ಕಡಲತೀರದ 60 ಎಕರೆ ಜಾಗದಲ್ಲಿ ಹರಡಿಕೊಂಡಿರುವ ಮನರಂಜನಾ ಸಂಕೀರ್ಣ. ರಾತ್ರಿಯವರೆಗೂ ಅಲ್ಲಿ ಕಾಲ ಕಳೆದು ಮನೆಗೆ ವಾಪಸ್ಸು ಬಂದೆವು. ಮಾರನೆದಿನ ಡಲಾಸ್‌ಗೆ ವಾಪಸ್ಸಾದೆವು.

ಇಲ್ಲಿಯ ನನ್ನ ಇನ್ನೊಂದು ಅನುಭವವೇನೆಂದರೆ, ನ್ಯೂ ಜರ್ಸಿಯಲ್ಲೇ ನನ್ನ ಕಸಿನ್, ಎರಡು ತಿಂಗಳ ನಂತರ ಡಲಾಸ್ ನಲ್ಲಿ ನಡೆಯುವ 'ಅಕ್ಕ' ಸಮ್ಮೇಳನದ ತನಕ ಇರಲು ಪ್ರಯತ್ನಿಸಿದ್ದ. ಅಲ್ಲಿ ನನ್ನ ತಂಗಿ ಮಗಳು, ಗಂಡ ಹೆಂಡತಿ ವೀಸಾಗಾಗಿ ಕೆನಡಾಗೆ ಮೂರು ದಿನ ಹೋಗಬೇಕಾದ್ರಿಂದ ನನ್ನ ವಸತಿಯ ಸಮಸ್ಯೆ ಎದುರಾಯಿತು. ಆಗ ಅಲ್ಲಿದ್ದ ಕನ್ನಡ ಸಮ್ಮೇಳನದವರು ಸುಬ್ಬಣ್ಣ ಎನ್ನುವವರ ಪರಿಚಯ ಮಾಡಿಕೊಟ್ಟರು. ಅವರ ಮನೆಗೆ ಹೋದಾಗ, ಅವರು ತುಂಬು ವಿಶ್ವಾಸದಿಂದ ಅವರ ಮನೆಯಲ್ಲಿ ನಾನಿರಲು ಸಂತೋಷಪಟ್ಟರು. ಮಾರನೆಯ ದಿನ ಬೆಳಗ್ಗೆ flight book ಆಗಿದೆ. ವೀಸಾ ಏನೋ ಎರಡು ತಿಂಗಳು ಇತ್ತು ಅದರದೇನೂ ಸಮಸ್ಯೆ ಇರಲಿಲ್ಲ. ರಾತ್ರಿ ಒಂದೇ ತಳಮಳ. ಇರುವುದೋ ಬಿಡುವುದೋ temptation. ಅವರಿಗೆ ನನ್ನ diabitis ಚಿಂತೆ. ತಂಗಿಯ ಅಳಿಯ ಹೊಸ ಕೆಲಸ ಹುಡುಕುತ್ತಿದ್ದ. ಹೀಗಾಗಿ ಸುಮಾರು ಒಂದು ಗಂಟೆ ರೂಮಿನಲ್ಲಿ ಕೂತು ಯೋಚಿಸಿದೆ. ದೇವರು ಇಷ್ಟು ಅವಕಾಶ ಕೊಟ್ಟಿದ್ದೇ ಹೆಚ್ಚು. ಸುಖವಾಗಿ ಊರು ತಲುಪುವುದೇ ವಾಸಿ ಎಂದು ಹೊರಗೆ ಬಂದು ಅವರಿಗೆ ನನ್ನ ನಿಶ್ಚಯ ತಿಳಿಸಿ ಮಾರನೆ ದಿನ ಮುಂಬಯಿಗೆ ಹೊರಡಲು ಅನುವಾದೆ. ಸಧ್ಯ ಅವರಿಗೂ ದೊಡ್ಡ relief.

ಹೀಗೆ ಮುಗಿಯಿತು, ಅಮೆರಿಕ ಪ್ರವಾಸ.

# ಹೊಂಗೆ ಮರ

(ಉಮಾ ರಾವ್ ಕಥೆಗಳು)

✍ ಉಮಾ ರಾವ್



ಅವರಿಬ್ಬರು ಅಣ್ಣ ತಮ್ಮಂದಿರು. ಆ ದೊಡ್ಡ ಮನೆಯ ಹಿತ್ತಲಿನಲ್ಲಿ ಬಾಣಂತಿ ಕೋಣೆಯಲ್ಲಿ ಹುಟ್ಟಿ, ಒಟ್ಟು ಕುಟುಂಬದಲ್ಲಿ ಬೆಳೆದವರು, ಆ ಹೊಂಗೆ ಮರದಡಿ ಗೋಲಿಯಾಡುತ್ತಾ, ಆ ಮರದ ಕೆಳಗೆ ಪೂರ್ವಿಕರು ಹೂತಿಟ್ಟಿದ್ದ ಕೊಪ್ಪರಿಗೆ ಹಣ, ಅದನ್ನು ಕಾಯುತ್ತಿರುವ ಸರ್ಪ, ಸಮಯ ಬಂದಾಗ ಆ ಕುಟುಂಬದವರಿಗೆ ಕನಸಿನಲ್ಲಿ ಸೂಚನೆಯಾಗಿ ಅದು ಸಿಗುವ ರೀತಿಯ ಬಗ್ಗೆ ಕತೆಗಳನ್ನು ಕೇಳುತ್ತಾ ರೋಮಾಂಚನಗೊಳ್ಳುತ್ತಾ ದೊಡ್ಡವರಾದವರು. ಮದುವೆಯಾದರೂ ತಂದೆ ಬದುಕಿರುವವರೆಗೂ ಅಕ್ಕರೆ ಇಂದಿದ್ದು, ನಂತರ ಆ ಹೊಂಗೆ ಮರದ ಸುತ್ತ ಜಾಗಕ್ಕಾಗಿ ಹಣಾಹಣಿ ಜಗಳ ಕಾದು, ಆಸ್ತಿ ಪಾಲು ಮಾಡಿಕೊಂಡವರು.

ಆದದ್ದಿಷ್ಟೇ. ಅಪ್ಪ ಬದುಕಿರುವವರೆಗೂ ಅವನಿಗೆ ಆ ನಿಧಿಯ ಬಗ್ಗೆ ಕನಸಿನಲ್ಲಿ ಯಾವ ಸೂಚನೆಯೂ ಆಗಿರಲಿಲ್ಲ. ದೇವರು ಅದನ್ನು ತನ್ನ ಪಾಲಿಗಿಟ್ಟಿಲ್ಲ ಎಂದುಕೊಂಡು ಅವನು ಅಗಸಿ ನೋಡಲೂ ಹೋಗಲಿಲ್ಲ. ಆ ನಂಬಿಕೆ ಮಕ್ಕಳಿಗಿರಲಿಲ್ಲ. ತಮ್ಮದಾಗಬೇಕಾಗಿದ್ದು ಈ ಕ್ಷಣ ಆಗಬೇಕು. ಕಾಯಬೇಕೇಕೆ, ಅದೂ ಗೊಡ್ಡು ನಂಬಿಕೆಗಳ ಆಧಾರದ ಮೇಲೆ.

ಊರಿನ ಹಿರಿಯರು, ದೊಡ್ಡ ವಕೀಲರು ಸೇರಿ ಆಸ್ತಿ ಸಮಪಾಲು ಮಾಡಿ, ಹೊಂಗೆ ಮರದ ಮೂಲಕ ಎಳೆದ ಗೆರೆ ಮೇಲೆ ಬೇಲಿ ಎದ್ದಿತು. ಮರುದಿನವೇ ಇಬ್ಬರೂ ತಮ್ಮ ತಮ್ಮ ಸ್ಥಳಗಳಲ್ಲಿ ಅಗೆತ ಪ್ರಾರಂಭಿಸಿದರು. ಎಷ್ಟೋ ದಿನ ಎಷ್ಟೋ ಆಳ ಅಗೆದರೂ ಸಿಕ್ಕಿದ್ದು ಬರೀ ಮಣ್ಣು. ಆಗ ಅವರ ಕೋಪ ನಿರಾಸೆಯ ತಳದಿಂದ ಗಟ್ಟಿ ನಂಬಿಕೆಯೊಂದು ಮೊಳೆಯಿತು. ಪಕ್ಕದಲ್ಲಿದ್ದವನಿಗೇ ಅಷ್ಟೂ ಹಣ ಸಿಕ್ಕಿದೆ. ಅವನು ಮುಚ್ಚಿಡುತ್ತಿದ್ದಾನೆ ಎಂಬ ನಂಬಿಕೆ. ಆಗ ಇವರಿಬ್ಬರಲ್ಲಿ ವಿರಸ ಹೆಚ್ಚಾಗಿ, ದ್ವೇಷ ಮಡುಗಟ್ಟಿತು. ತಮ್ಮ ಮಕ್ಕಳು ಒಬ್ಬರ ಮುಖ ಒಬ್ಬರು ನೋಡದಂತೆ ಬೆಳೆಸುವ ಹಾಗೆ ಮಾಡಿತು.

ಅಂದಿನಿಂದ ಇಬ್ಬರ ಮನೆಯಲ್ಲೂ ನಡೆದ ಪ್ರತಿಯೊಂದು ಕೆಲಸ, ಮಾಡಿದ ಪ್ರತಿ ಸಂತೋಷ ಎಲ್ಲರಿಗೂ ಆ ಹಣಕ್ಕೂ ಕೊಂಡಿಯಾಯಿತು. ಹೇಗೆಂದರೆ

– ಅಣ್ಣ ಕಾರು ತಗೋಳ್ದೇ ಏನು ಮಾಡ್ತಾನೆ, ಕೊಳಗ ಹಣ ಕೂತಲ್ಲೇ ಸಿಕ್ರೆ.

– ಅತ್ತಿಗೆ ಕತ್ತಿನ ವಜ್ರದಡ್ಡಿಗೆ ನೋಡ್ದ್ಯಾ... ಅದಕ್ಕೂ ಕೇಳಿಕೊಂಡು ಬಂದಿರಬೇಕು.

– ಚಿಕ್ಕೋನು ಮೊದಲಿನಿಂದ ಅದೃಷ್ಟವಂತ ಮಗ.

– ಅಮೆರಿಕಾಗೆ ಕಳಸದೇ ಏನು ಮಗನ್ನ, ಅಷ್ಟೂ ತಾನೊಬ್ನೇ ಹೊಡೆದುಕೊಂಡಿದಾನೆ.

ಇತ್ಯಾದಿ.

ಅಪರಿಚಿತರಂತೆ ಬೆಳೆದ ಇವರ ಮಕ್ಕಳು ದೊಡ್ಡವರಾಗಿ ಅಮೆರಿಕಾ ಪಾಲಾದರು. ನಿಧಿಯ ಬಗ್ಗೆ ಪರಸ್ಪರ ದ್ವೇಷ, ಕಿರಿ ಕಿರಿ, ಅಸೂಯೆಯಲ್ಲೇ ಬದುಕು ಕಳೆದು ಇವರಿಬ್ಬರೂ ತೀರಿಕೊಂಡರು. ಎಷ್ಟೋ ವರ್ಷಗಳು ಹಳೆಯ ವಾಚ್‌ಮನ್ ಉಸ್ತುವಾರಿಯಲ್ಲಿದ್ದ ಮನೆ ಅವನು ಸತ್ತಾಗ ಹಾಳು ಬಿದ್ದಿತು.

ಅಷ್ಟು ಹೊತ್ತಿಗೆ ಊರು ಬೆಳೆದಿತ್ತು. ಮೆಡಿಕಲ್ ಇಂಜಿನಿಯರಿಂಗ್ ಕಾಲೇಜುಗಳು, ಫಾಸ್ಟ್ ಫುಡ್ ಜಾಯಿಂಟ್‌ಗಳು, ಸಿನಿಮಾ ಥಿಯೇಟರ್‌ಗಳು, ಸೈಬರ್ ಇನ್‌ಗಳು, ಡಾನ್ಸ್‌ಬಾರ್‌ಗಳು ಊರಿನಲ್ಲಿ ತುಂಬಿ ಹೋದವು. ಆಗ ರಿಯಲ್ ಎಸ್ಟೇಟ್ ಮಾರ್ವಾಡಿಯೊಬ್ಬನ ಕಣ್ಣು ಈ ಮನೆಯ ಮೇಲೆ ಬಿತ್ತು. ಆ ಮನೆ ಕೆಡವಿ ಕಮರ್ಷಿಯಲ್ ಕಾಂಪ್ಲೆಕ್ಸ್ ಕಟ್ಟಿದರೆ ಬರುವ ಲಾಭದ ಅರಿವು ಅವನಿಗಿತ್ತು. ಹಾಗಾಗಿ ವಿದೇಶದಲ್ಲಿದ್ದ ಹುಡುಗರಿಗೆ ಕರೆ ಹೋಯಿತು.

ಇದ್ದಕ್ಕಿದ್ದಂತೆ ಕೋಟ್ಯಾಂತರ ಗಿಟ್ಟಿಸುವ ಅವಕಾಶ ಕಂಡು ದಿಗ್ಭ್ರಮೆಗೊಂಡು, ಮಾರ್ವಾಡಿಯೊಂದಿಗೆ ಡೀಲ್ ಮಾಡಿಕೊಳ್ಳಲು ಇವರಿಬ್ಬರೂ ಭಾರತಕ್ಕೆ ಓಡಿ ಬಂದರು. ಮಾರ್ವಾಡಿಯ ಎದುರಿಗೆ ಕೂತು ಜೀವನದ ಮೊದಲ ಬಾರಿ ಪರಸ್ಪರ ಮಾತಾಡಿದರು. ಬೆಲೆ ನಿಶ್ಚಯಿಸಿ, ಸಹಿ ಹಾಕಿ ನಗುನಗುತಾ ಕೈ ಕುಲುಕಿದರು. ಬೇಲಿ ಕಿತ್ತು, ಹೊಂಗೆ ಮರ ಉರುಳಿಸಿ, ಭೂಮಿ ಅಳೆದು ಅವನಿಗೆ ಒಪ್ಪಿಸಿದರು. ಅಂದು ರಾತ್ರಿ ಊರಿನ ಪ್ರತಿಷ್ಠಿತ ಹೋಟೆಲ್‌ಗೆ ಹೋಗಿ ಸ್ಕಾಚ್ ನೊಂದಿಗೆ ಸೆಲೆಬ್ರೇಟ್ ಮಾಡಿ, ಬೀಗುತ್ತಾ ಹೆಂಡತಿಯರಿಗೆ ವಜ್ರದ ಒಡವೆ ಖರೀದಿಸಿ, ಅಮೆರಿಕಾ ಫ್ಲೇನ್ ಹತ್ತಿದರು.

# ನಗು

ವರ್ಲಿ ನಾಕಾದಿಂದ ಹಾಜಿ ಅಲಿಗೆ ಹೋಗುವ ಅತ್ಯಂತ ಗಲಾಟೆಯ ರಸ್ತೆಯುದ್ದಕ್ಕೂ ನಿಂತಿದ್ದ ಬಹುಮಹಡಿ ಹೋಟೆಲ್‌ಗಳು, ಭವ್ಯ ಆಫೀಸುಗಳು, ತುಂಬಿ ಫುಟ್‌ಪಾತಿಗೆ ಚೆಲ್ಲಿರುವ ಅಂಗಡಿಗಳ ನಡುವೆ ಅವರ ಚಾಲ್ ಇತ್ತು. 1960ರಲ್ಲಿ ನಿರ್ಮಿಸಿದ್ದ ಈ ಕಟ್ಟಡದಲ್ಲಿ ಸಾಲಾಗಿ ನಾಲ್ಕು ಮನೆಗಳು, ಅಂದರೆ ನಾಲ್ಕು ರೂಮುಗಳು. ಒಂದು ಕೊನೆಯಲ್ಲಿ ನಾಲ್ಕು ಸಂಸಾರಗಳೂ ಹಂಚಿಕೊಳ್ಳಬೇಕಾದ ಒಂದು ಕಾಮನ್ ಬಾತ್ ರೂಮ್ ಹಾಗೂ ಲೆಟ್ರಿನ್. ಗೋಡೆಯ ಗಾರೆಯುದುರಿ, ಕಿಟಕಿ ಬಾಗಿಲಿಗೆ ಹಚ್ಚಿದ ನೀಲಿ ಪೇಂಟ್ ಕಿತ್ತು ಹಿಂದಿದ್ದ ಗುಲಾಬಿ ಬಣ್ಣ ಅಲ್ಲಿ ಕಾಣುತ್ತಿತ್ತು.



ಇಡೀ ದಿನದ ದುಡಿತ ಮುಗಿಸಿ ಮನೆಗೆ ಬಂದ ಗುಂಡ್ಯಾ, ಮುನ್ನಾ, ಪೋಖರೆ ಮತ್ತು ದಿಲೀಪ ಸಾಲಾಗಿ ಆ ಚಾಲಿನ ಮೆಟ್ಟಿಲಿನ ಮೇಲೆ ಬೀಡಿ ಸೇದುತ್ತಾ ಕೂತಿದ್ದರು. ದಿನಾ ಬೆಳಗಾಗೆದ್ದು, ಐದರಿಂದ ಏಳರವರೆಗೆ ಮಾತ್ರ ನೀರು ಬರುವ ಬಚ್ಚಲು ಮನೆಯೆದುರು ಕೈಯ್ಯಲ್ಲಿದ್ದ ಟವಲ್ಲುಗಳೊಂದಿಗೆ ಕ್ಯೂ ನಿಂತು ದಿನ ಪ್ರಾರಂಭಿಸುವ ಇವರಿಗೆ, ಈ ಕ್ಷಣ ಪಕ್ಕಪಕ್ಕದಲ್ಲೇ ಕೂತಿದ್ದರೂ ಒಬ್ಬರಿಗೊಬ್ಬರ ಅರಿವಿರಲಿಲ್ಲ. ಅವರವರ ಜಗತ್ತಿನಲ್ಲಿ ಅವರು ಮುಳುಗಿ ಹೋಗಿದ್ದರು. ಒಳಗಿನ ತಮ್ಮ ತಮ್ಮ ಅಡಿಗೆ ಮನೆಗಳಲ್ಲಿ ಅವರ ತಾಯಿ ಅಥವಾ ಹೆಂಡತಿ ಅಥವಾ ತಂಗಿ ಬೇಯಿಸುತ್ತಿರುವ ರೊಟ್ಟಿಯ ಘಮ ಘಮ, ಮಸಾಲೆ ಅರೆಯುತ್ತಿರುವ ಕಲ್ಲಿನ ಲಯಬದ್ಧ ಶಬ್ದ ಎಂದಿನಂತೆ ಇವರ ಹಸಿವನ್ನು ಹೊಡೆದೆಬ್ಬಿಸಿ, ಎಲ್ಲವೂ ಸರಿಯಾಗಿದೆ ಎಂಬ ಸುರಕ್ಷಿತ ಭಾವನೆಯನ್ನು ಮನಸ್ಸಿನಲ್ಲಿ ತುಂಬುತ್ತಿರಲಿಲ್ಲ. ರಸ್ತೆಯ ಮೇಲೆ ಓಡುತ್ತಿರುವ ವಾಹನಗಳನ್ನು ದಿಟ್ಟಿಸುತ್ತಾ ಅವರು ಗೊಂಬೆಗಳಂತೆ ಕೂತಿದ್ದರು. ಅವರಿಗೂ ರಸ್ತೆಗೂ ನಡುವೆ ಇರುವ ಫುಟ್‌ಪಾತಿನ ಮೇಲೆ ಪಕ್ಕದ ಟುಟೋರಿಯಲ್ ಕ್ಲಾಸಿಗೆ ಬರುವ ಹುಡುಗರ ಸೈಕಲ್ಲುಗಳು ಸಾಲಾಗಿ ಸರಮಾಲೆಯಂತೆ ಒಂದಕ್ಕೊಂದು ಒರಗಿ ನಿಂತಿದ್ದವು. ಈ ಮುಸ್ಸಂಜೆ ಹೊತ್ತಿನಲ್ಲಿ ಓಡುತ್ತಿರುವ ವಾಹನಗಳು ಸೈಕಲ್ ಚಕ್ರಗಳ ಮೂಲಕ ವಿಚಿತ್ರವಾಗಿ ಕಾಣುತ್ತಿದ್ದವು.

ಇಂದು ವರ್ಕ್‌ಶಾಪಿನಿಂದ ಮರಳಿ ಬರುವಾಗ ಗುಂಡ್ಯಾಗೆ ಸ್ಟ್ಯಾಂಡ್ ಸಿನಿಮಾದೆದುರು ತರುಬಿ ಸುರೇಖಾ ಏನೇನೋ ಅಂದಿದ್ದಾಳೆ. 2 ವರ್ಷದಿಂದ ಪ್ರತಿ ಭಾನುವಾರವೂ ಜುಹೂ ಸ್ಪೆಷಲ್ ಬಸ್ಸಿನಲ್ಲಿ ಇವನ ಪಕ್ಕ ಅಂಟಿಕೊಂಡು ಕೂತು ಪ್ರಯಾಣಿಸಿ, ಬೀಚ್‌ನಲ್ಲಿ ಭೇಲ್‌ಪೂರಿ ತಿನ್ನುತ್ತಾ ತಾವು ಮಾಡಬಹುದಾದ ಖೋಲಿಯ ಬಗ್ಗೆ ಹರಟುತ್ತಿದ್ದ ಇವಳು "ಈ ಟೆಂಪರ್ವರಿ ಕೆಲಸ ಎಷ್ಟು ದಿನಾಂತ. ನಿನ್ನನ್ನೇ ನೀನು ನೋಡ್ಕೊಳ್ಳೋಕೆ ಆಗೊಲ್ಲ, ಇನ್ನು ನನ್ನನ್ನೇನು ದೇಖ್‌ಭಾಲ್ ಮಾಡ್ತೀ" ಎಂದೆಲ್ಲಾ ತಮಾಷೆಯ ಧಾಟಿಯಲ್ಲೇ ಅಂದಿದ್ದಾಳೆ. ಅವಳು ರಸ್ತೆ ತಿರುವಿನಲ್ಲಿ ಕಣ್ಮರೆಯಾಗುವ ಮೊದಲು ಮರ್ಜುಬಾನ್ ಕಟ್ಟಡದ ವಾಚ್‌ಮನ್‌ಗೆ ಏನೋ ಹೇಳಿ ಕಿಸಕ್ಕನೆ ನಕ್ಕ ನಗು ಇವನನ್ನು ಇನ್ನೂ ಬಿಟ್ಟು ಹೋಗಿಲ್ಲ.

"ನಿನ್ನ ತಂಗಿ ಮದುವೇಲಿ ಹುಡುಗನಿಗೆ ಘಡೀ, ಅಂಗೂಠಿಕೊಳ್ಳುವ ಜವಾಬ್ದಾರಿ ನಿನ್ನದು" ಎಂದು ತಾಯಿ ಬರೆದ ಕಾಗದ ಇನ್ನೂ ದಿಲೀಪನ ಜೇಬಲ್ಲಿ ಹಾಗೇ ಕೂತಿದೆ. ತಾನು ದೊಡ್ಡ ಧನಿಕ ವ್ಯಾಪಾರಿ ಎಂದುಕೊಂಡು ಬಿಟ್ಟಿದ್ದಾಳೆ ಅಮ್ಮ. ತಾನು ಮಾಡಿ ಮಾರುವ ಬಿದಿರಿನ ಬಣ್ಣಬಣ್ಣದ ಹಾವುಗಳು ಮಾರಾಟವಾಗುವುದೇನು ಸುಲಭವಾಗಿರಲಿಲ್ಲ. ಅವನ್ನು ದೊಡ್ಡದು ಚಿಕ್ಕದು ಮಾಡಿ, ಸರಕ್ ಸರಕ್ ಎಂದು ಆಡಿಸುತ್ತ ಮಕ್ಕಳ ಮುಂದೆ ಕುಣಿದು ಸಾಕಾಗಿ ಹೋಗುತ್ತಿತ್ತು. ಕೊನೆಗೆ ಸಿಗುತ್ತಿದ್ದುದು ಎರಡು ಹೊತ್ತು ಊಟಕ್ಕಾಗುವಷ್ಟು ಮಾತ್ರ.

ದಿನಾ ತಪ್ಪದೆ ಸಂಜೆಗೆ ಬಂದು ಅಮರುತ್ತಿದ್ದ ಜ್ವರದ ಕಾಟ ತಡೆಯಲಾಗದೆ ಡಾಕ್ಟರ್ ಹತ್ತಿರ ಮುನ್ನಾ ಹೋದಾಗ ಖೂನ್ ತಪಾಸಿಗೆ ಬರೆದುಕೊಟ್ಟಿದ್ದರು. ರಿಪೋರ್ಟ್ ನೋಡಿ ಹುಬ್ಬು ಗಂಟಿಕ್ಕಿದ ಡಾಕ್ಟರ್ ಮುನ್ನಾಗೆ ಕಟುವಾಗಿಯೇ "ಬಾಹರ್ ಗಯಾ ಥಾ ಕ್ಯಾ?" ಎಂದು ಕೇಳಿದಾಗ, ಅವನು ಅವರು ಕನ್ನೆಗೆ ಹೊಡೆದಂತೆ ಬೆಚ್ಚಿಬಿದ್ದು "ಇಲ್ಲ, ಇಲ್ಲ" ಎಂದು ತಲೆ ಅಲ್ಲಾಡಿಸಿದ. ಆ ಕ್ಷಣದಲ್ಲಿ, ಆ ಶನಿವಾರ ಸಂಜೆ ಆರನೇ ಮಹಡಿಯಲ್ಲಿದ್ದ ಲಿಫ್ಟ್‌ರೂಮಿನ ಧೂಳು ನೆಲದ ಮೇಲೆ ತನ್ನ ತೋಳುಗಳಲ್ಲಿ ಮಲಗಿದ್ದ ವಿಮಲಾಳ ಬೆವರಲ್ಲಿ ತೊಯ್ದ ದೇಹ ನೆನಪಾಯಿತು. "ಏಡ್ಸ್" ಎಂಬ ಪದ ಕಿವಿ ಮೇಲೆ ಬೀಳುತ್ತಲೇ ಕೈಕಾಲು ಉಡುಗಿ, ಇದೇ ಕಾರಣಕ್ಕಾಗಿ ಟಿಕ್–ಟ್ವೆಂಟಿ ಕುಡಿದಿದ್ದ ಭಾವೂನ ಮುಖ ಮನಸ್ಸಿಗೆ ಬರುತ್ತಲೇ ಇತ್ತು.

ಹೂ ಅನ್ನಲೇ ಬೇಡವೇ? ಪೋಖರೆಗೆ ಉತ್ತರ ಸಿಕ್ಕಿಲ್ಲ. "ಎಷ್ಟು ದಿನಾಂತ ಈ ಪ್ಯೂನ್ ಕೆಲಸದಲ್ಲಿ ಸಾಯ್ತೀ? ನನ್ನ ಜೊತೆ ಸೇರ್ಕೋ. ಈಗ ದಂಧಾ ಚೆನ್ನಾಗಿ ನಡೀತಿದೆ. ಅಕಸ್ಮಾತ್ ಸಿಕ್ಕಿಬಿದ್ರೆ ಒಂದೆರಡು ತಿಂಗಳು ಒಳಗಿದ್ದು ಬರೋದು. ದುಡ್ಡು ಬಂದಾಗ, ಹೇಗೆ ಬರುತ್ತೆ ಗೊತ್ತಾ?" ಎಂದವನೇ ತನ್ನ ಸೆಕೆಂಡ್ ಹ್ಯಾಂಡ್ ಯಮಹಾ ಭುರ್ರನೆ ಓಡಿಸಿಕೊಂಡು ಹೋದ ರಾಜಾಗೆ ಹೂಂ ಅನ್ನುಲು ಪೋಖರೆಗೆ ಧೈರ್ಯ ಬರುತ್ತಿಲ್ಲ.

ನಾಲ್ವರು ಬಿಗಿದ ಮುಖಗಳನ್ನು ಹೊತ್ತು ಕೂತಂತೆಯೇ, ಕಡಲ ಕಡೆಯಿಂದ ಬೀಸಿದ ಮನ್ಸೂನ್ ಮೊದಲಿನ ಗಾಳಿ ಜೋರಾಯಿತು. ಸುಂಯ್ಯನೇ ಬೀಸುತ್ತಾ, ಸುತ್ತ ಮುತ್ತಲೂ ಬಿದ್ದಿದ್ದ ಧೂಳು, ಕಸ, ಸಿಗರೇಟ್ ತುಂಡುಗಳು, ಪಾನ್ ಪರಾಗ್ ರ‍್ಯಾಪರ್‌ಗಳು, ಐಸ್‌ಕ್ರೀಂ ಕಡ್ಡಿಗಳು, ತರಗೆಲೆಗಳು, ಹರಿದ ಪೇಪರುಗಳನ್ನು ಎಬ್ಬಿಸಿತು. ಹಾಗೇ ಸಾಲಾಗಿ ನಿಂತಿದ್ದ ಸೈಕಲ್ಲುಗಳನ್ನು ಗಡಗಡನೆ ನಡುಗಿಸಿತು. ಮರುಕ್ಷಣವೇ ಆ ಸೈಕಲ್ಲುಗಳು ಧಪಧಪನೇ ಒಂದರ ಮೇಲೊಂದು ಬಿದ್ದವು. ಯಾರೋ ತಳ್ಳಿದಂತೆ ಸಾಲಾಗಿ ಬಿದ್ದ ಸೈಕಲ್ಲುಗಳನ್ನು ದಿಟ್ಟಿಸುತ್ತಿದ್ದ ಗುಂಡ್ಯಾ ನಗತೊಡಗಿದ. ಪಕ್ಕದವರಿಗೆ ಚುಚ್ಚಿ, ಅವರತ್ತ ಕೈಚಾಚಿ ತೋರಿಸಿ ನಕ್ಕ. ಮಿಕ್ಕವರೂ ಅವನ ನಗುವಿನಲ್ಲಿ ಸೇರಿಕೊಂಡರು. ಹೊಟ್ಟೆ ಹಿಡಿದುಕೊಂಡು ಆ ಸೈಕಲ್ಲುಗಳತ್ತ ಬೆರಳು ತೋರಿಸುತ್ತಾ ಬಿದ್ದುಬಿದ್ದು ನಗತೊಡಗಿದರು.

# "ಸಹಸ್ರ ಚಂದ್ರ ದರ್ಶನ"

(ನೇಸರು ಜಾಗತಿಕ ಸಣ್ಣ ಕಥೆ ಸ್ಪರ್ಧೆಗೆ ಬಂದ ಕಥೆ)

✍ ಪೂರ್ಣಿಮಾ ರಾಮಚಂದ್ರ ಹೆಗಡೆ

'ಆನಂದ ಸದನ'ದಲ್ಲಿ ಇಂದು ಹೆಸರಿಗೆ ತಕ್ಕಂತೆ ನೆಂಟರಿಷ್ಟರು, ಬಂಧು, ಬಳಗ, ಹಿತೈಷಿಗಳು... ಇವರೆಲ್ಲರಿಂದ ಕೂಡಿ ಆನಂದದ ಉತ್ಸವವೇ ನಡೆಯುತ್ತಿದೆ... ಸಂಭ್ರಮದ ವಾತಾವರಣ ನಿರ್ಮಾಣವಾಗಿದೆ. ವೈದಿಕ ವೃಂದದ ಮಂತ್ರ ಘೋಷ ಮುಗಿಲು ಮುಟ್ಟಿದೆ.. ಹೋಮ, ಹವನ, ದಾನ –ಧರ್ಮ, ವಿವಿಧ ಧಾರ್ಮಿಕ ಆಚರಣೆಗಳು ವಿಧಿವತ್ತಾಗಿ, ಸಾಂಗೋಪಾಂಗವಾಗಿ ನೆರವೇರುತ್ತಿದೆ.. ಎಂಬತ್ತೊಂದರ ಇಳಿವಯಸ್ಸಿನಲ್ಲೂ ಮಿಂಚುತ್ತಿದ್ದಾರೆ ರಾಮಚಂದ್ರ ರಾಯರು.. ಎಂಬತ್ತು ವಸಂತಗಳೊಂದಿಗೆ ಮತ್ತೆ ಎಂಟು ತಿಂಗಳನ್ನು ದಾಟಿದ ರಾಯರು ಸಪತ್ನಿಕರಾಗಿ ಅಪರೂಪದ ಸಮಾರಂಭದ ಸವಿ ಘಳಿಗೆಯನ್ನು ಸಂಭ್ರಮಿಸುತ್ತಿದ್ದಾರೆ. ಈ ಸಂಭ್ರಮಕ್ಕೆ ಕಾರಣೀಕರ್ತರಾದ ಮಗ, ಸೊಸೆ, ಮೊಮ್ಮಕ್ಕಳ ಕಡೆ ಆಗಾಗ ಹೆಮ್ಮೆಯಿಂದ, ಪ್ರೀತಿ, ಅಭಿಮಾನದಿಂದ ದೃಷ್ಟಿ ಹಾಯಿಸುತಿದ್ದಾರೆ..ತಮ್ಮ ಅದೃಷ್ಟಕ್ಕೆ ಸಂತಸದಿಂದ ಬೀಗುತ್ತಿದ್ದಾರೆ.

ಇವರಷ್ಟೇ ಖುಷಿ, ಸಂತೋಷದ ಅನುಭೂತಿಯನ್ನು ಇವರದೇ ವಯಸ್ಸಿನ ಜೋಡಿಯೂ ಅನುಭವಿಸುತ್ತಿದೆ ಅನತಿ ದೂರದಲ್ಲಿ ನಿಂತು. ಇವರಿಗಿಂತಲೂ ಹೆಚ್ಚು ಸಂಭ್ರಮ ಆ ಮುಗ್ಧ ಮೊಗಗಳಲ್ಲಿ ಕಂಡು ಬರುತ್ತಿದೆ. ಹೆಂಡತಿ ಅಲ್ಲಿನ ಶಾಸ್ತ್ರಬದ್ಧ ಆಚರಣೆಗಳೆಲ್ಲನ್ನೂ ತದೇಕ ಚಿತ್ತದಿಂದ ಕಣ್ಣರಳಿಸಿ ನೋಡುತಿದ್ದರೆ ಗಂಡನ ಕಣ್ಣುಗಳಿಂದ ನೀರು ಧಾರಾಕಾರವಾಗಿ ಸುರಿಯುತ್ತಿದೆ. ತಡೆದುಕೊಳ್ಳಲಾರದ ಅತೀವ ಸಂತೋಷಕ್ಕೋ ಅಥವಾ ಎದೆಯಲ್ಲಿ ಮಡುಗಟ್ಟಿದ್ದ ನೋವು, ಸಂಕಟಗಳೆಲ್ಲ ಕರಗಿ ನೀರಿನ ರೂಪದಲ್ಲಿ ಹರಿದು ಬರುತ್ತಿದೆಯೋ ತಿಳಿಯುತ್ತಿಲ್ಲ..

ಸಂಭ್ರಮಾಚರಣೆಯಲ್ಲಿ ಮೈಮರೆತ ರಾಮಚಂದ್ರರ ದೃಷ್ಟಿಗೆ ಈ ಜೋಡಿ ಕಾಣಿಸಿತು.

"ಹಿರಿಯಾ, ಪಾರ್ವತೀ.... ಯಾಕೆ ಅಲ್ಲೇ ನಿಂತಿದ್ದೀರಿ. ಮುಂದೆ ಬನ್ನಿ"

ಕಂಚಿನ ಕಂಠದ ಆ ಕರೆಗೆ ಅಲ್ಲಿ ಕುಳಿತವರ ದೃಷ್ಟಿ ಈ ಜೋಡಿಯ ಮೇಲೆ ಬಿದ್ದಿತು.. ಎಲ್ಲರ ಮುಖದಲ್ಲೂ ಅಚ್ಚರಿಯ ಭಾವ. ಕೆಲಸದಾಳುಗಳನ್ನು ಹೋಮ, ಹವನ, ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸುತ್ತಿರುವ ಪವಿತ್ರ ತಾಣದೆಡೆ ಕರೆಯುತ್ತಿದ್ದಾರೆ... ಆ ಸ್ಥಳದಲ್ಲಿ ಮಡಿಯುಟ್ಟವರಿಗೆ ಮಾತ್ರ ಅವಕಾಶ. ಹಾಗಿರುವಾಗ ಇವರಿಬ್ಬರು ಅಲ್ಲಿಗೆ ಹೋದರೆ ಆ ಪ್ರದೇಶ ಮೈಲಿಗೆಯಾಗಲಾರದೇ...? ಇವರಿಗೇನಾಗಿದೆ...? ವಯಸ್ಸು ಆದ ಹಾಗೆ ಇವರ ಬುದ್ಧಿಗೂ ಮಂಕು ಕವಿಯಿತೇನೋ...? ತಮ್ಮಲ್ಲೇ ತರ್ಕಿಸತೊಡಗಿದರು. ಆ ಜೋಡಿ ನಿಂತ ಸ್ಥಳದಿಂದ ಒಂದಿಂಚೂ ಕದಲಲಿಲ್ಲ. ಬದಲಿಗೆ ಸಂಕೋಚದ ಮುದ್ದೆಯಾಗಿ, ಮೈಯನ್ನು ಹಿಡಿಯಾಗಿಸಿ ನಿಂತಿತು ... .ಮತ್ತೊಮ್ಮೆ "ಹಿರಿಯಾ" ಎಂದು ಕರೆದರು ರಾಮಚಂದ್ರರು. ಜೊತೆಯಲ್ಲಿ ಮಗ ಶ್ರೀಧರನೂ ದನಿಗೂಡಿಸಿದ. ಈ ಕರೆಯಲ್ಲಿ ಆತ್ಮೀಯತೆಯಿತ್ತು... ಆರ್ದ್ರತೆಯಿತ್ತು.. ಮಾರ್ದವತೆಯಿತ್ತು.....ಬೇಡಿಕೆಯಿತ್ತು. 'ಹಿರಿಯಾ' ಎನ್ನುವ ಅಪ್ಯಾಯತೆಯ ಸ್ವರ ಐವತ್ತು ವರ್ಷಗಳ ಹಿಂದಿನ ಸ್ವರವನ್ನೇ ನೆನಪಿಸಿತು ಹಿರಿಯನಿಗೆ.

ಹಿರಿಯನೆನ್ನುವ ಹೆಸರನ್ನು ಯಾರಿಟ್ಟರೋ ಅವನಿಗೆ.. ಕೆಲಸಗಾರರಿಗೆಲ್ಲ ಹಿರಿಯಣ್ಣನ ಹಾಗಿದ್ದ ಅವನನ್ನು ಕಂಡರೆ ಎಲ್ಲರಿಗೂ ಇಷ್ಟ. ಹಿರಿಯನ ಅಪ್ಪ ಘಟ್ಟದ ಕೆಳಗಿನಿಂದ ಕೆಲಸ ಹುಡುಕಿಕೊಂಡು ಘಟ್ಟಕ್ಕೆ ಬಂದಾಗ ಗೋವಿಂದಯ್ಯನವರು ಕರೆದು ಕೆಲಸ ಕೊಟ್ಟರು. ಅಲ್ಲದೇ ತಮ್ಮ ಗದ್ದೆಯ ಬಳಿ ಬಿಡಾರ ಹೂಡಲು ಸ್ವಲ್ಪ ಜಾಗವನ್ನೂ ಕೊಟ್ಟರು. ಇಲ್ಲಿಗೆ ಬಂದಾಗ ಹಿರಿಯನಿಗೆ ಅಷ್ಟೇ ಆರು ವರ್ಷ ವಯಸ್ಸು. ತಾಯಿಯೂ ಇರಲಿಲ್ಲ. ಗೋವಿಂದಯ್ಯನವರ ಮಗ ರಾಮಚಂದ್ರನಿಗೂ ಇವನದೇ ವಯಸ್ಸು. ಇಬ್ಬರೂ ಒಟ್ಟಿಗೇ ಆಟವಾಡುತ್ತಾ ಬೆಳೆದವರು.. ತಾಯಿಯಿಲ್ಲದ ಮಗುವೆಂದು ರಾಮಚಂದ್ರನ ತಾಯಿ ಹಿರಿಯನ ಮೇಲೆ ಹೆಚ್ಚು ಅಕ್ಕರೆ ತೋರುತಿದ್ದರು. ಆಳು ಮಗನೆಂದು ಕೀಳಾಗಿ ಕಾಣುತ್ತಿರಲಿಲ್ಲ. ಒಟ್ಟಿಗೆ ಶಾಲೆಗೆ ಹೋಗುತ್ತಾ, ಒಡಹುಟ್ಟಿದವರಿಗಿಂತಲೂ ಹೆಚ್ಚು ಆತ್ಮೀಯರಾದರು. ಹಿರಿಯನಿಗೆ ಓದು ತಲೆಗೆ ಹತ್ತಲಿಲ್ಲ.. ಅಪ್ಪನ ಜೊತೆ ತಾನೂ ಗೋವಿಂದಯ್ಯನವರ ಜಮೀನಿನಲ್ಲೇ ದುಡಿಯ ತೊಡಗಿದ. ರಾಮಚಂದ್ರನೂ ಜ್ಞಾನಾರ್ಜನೆಗಾಗಿ ಕಾಲೇಜು ಮುಗಿಸಿದನೇ ವಿನಃ ಅವನಿಗೂ ಹೊರಗಡೆ ಹೋಗಿ ದುಡಿಯುವ ಅಗತ್ಯವಿರಲಿಲ್ಲ. ಮದುವೆ ವಯಸ್ಸಿಗೆ ಬಂದ ಹಿರಿಯನಿಗೆ ಅವನ ದೂರದ ಸಂಬಂಧದ ಹುಡುಗಿ ಪಾರ್ವತಿಯನ್ನು ಕೊಟ್ಟು ಮದುವೆ ಮಾಡಿದರು. ಮಾರನೇ ವರ್ಷ ರಾಮಚಂದ್ರನಿಗೂ ಯೋಗ್ಯ ಕನ್ಯೆ ಗಿರಿಜಾಳೊಂದಿಗೆ ವಿವಾಹವಾಯಿತು..

ವರ್ಷಗಳು ಉರುಳಿದವು. ಹಿರಿಯನೀಗ ಒಂದು ಗಂಡು ಮಗುವಿನ ತಂದೆ. ಮಗುವಿಗೆ ನಾಲ್ಕು ವರ್ಷ ನಡೆಯುತ್ತಿದೆ.. ಆದರೆ ಗಿರಿಜಾಳ ಒಡಲಲ್ಲಿ ಮಾತ್ರ ಕುಡಿಯೊಡೆಯುವ ಯಾವ ಲಕ್ಷಣಗಳೂ ಕಾಣಿಸುತ್ತಿಲ್ಲ. ಎಣ್ಣೆಗೆಂಪು ಬಣ್ಣದ ಆ ಚೂಟಿ ಮಗುವನ್ನು ನೋಡಿದಾಗಲೆಲ್ಲ ಇವಳಲ್ಲೂ ತಾಯ್ತನದ ಆಸೆ ಚಿಗುರುತಿತ್ತು. ಆ ಮಗುವನ್ನೆತ್ತಿ ಮುದ್ದಾಡಿ ಬಿಡುತಿದ್ದಳು.. ಕಂಡ ಕಂಡ ಔಷಧಿ ಮಾಡಿಯಾಯಿತು,..

ದೇವಸ್ಥಾನಗಳಲ್ಲಿ ಹರಕೆ ಹೊತ್ತದ್ದೂ ಆಯಿತು. ತಿಂಗಳು ತುಂಬಿ ಎರಡು ದಿನ ಮುಂದೆ ಹೋಯಿತೆಂದರೆ ಎಲ್ಲಿಲ್ಲದ ಖುಷಿಯಿಂದ ಕುಣಿದಾಡಿ ಬಿಡುತಿದ್ದಳು. ಆದರೆ ಆ ಖುಷಿಯನ್ನು ಅನುಭವಿಸುವ ಭಾಗ್ಯ ಅವಳಿಗಿರಲಿಲ್ಲ. ಒಂದೆರಡು ಬಾರಿ ಗರ್ಭಪಾತವೂ ಆಯಿತು.

ಹಿರಿಯನ ಹೆಂಡತಿ ಎರಡನೇ ಬಾರಿ ಗರ್ಭಿಣಿಯಾದಳು. ಈ ಸುದ್ದಿ ಗಿರಿಜಾಳ ಕಿವಿ ತಲುಪಲು ಹೆಚ್ಚು ತಡವಾಗಲಿಲ್ಲ. ಕಳೆದ ನಾಲ್ಕೈದು ದಿನಗಳಿಂದ ಜ್ವರದ ತಾಪದಿಂದ ನಿತ್ರಾಣಳಾಗಿದ್ದಳು ಕೂಡ. ಈ ವಿಷಯ ಕೇಳಿದ ತಕ್ಷಣ ತಲೆ ಸುತ್ತಿದಂತಾಗಿ ಅಲ್ಲಿಯೇ ಕುಸಿದು ಬಿದ್ದಳು.. ಕೂಡಲೇ ಸನಿಹದ ಆಸ್ಪತ್ರೆಗೆ ಕರೆದೊಯ್ದ ರಾಮಚಂದ್ರ.. ಜ್ವರದ ಸುಸ್ತಿಗೆ ಹೀಗೆ ಆಗಿರಬಹುದು ಎಂದು ಕೊಂಡವರಿಗೆ ಒಂದು ಅಚ್ಚರಿ ಕಾದಿತ್ತು. ಗಿರಿಜಾ ಗರ್ಭವತಿಯಾಗಿದ್ದಳು. ತುಂಬಾ ಕಾಳಜಿಯಿಂದ ನೋಡಿಕೊಳ್ಳಬೇಕು ಎಂಬ ಕಿವಿಮಾತು ಹೇಳಿ ಕಳಿಸಿದ್ದರು ಡಾಕ್ಟರ್. ಪಾರ್ವತಿಯು ಚುರುಕಿನಿಂದ ಓಡಾಡಿಕೊಂಡು ಗಿರಿಜಾಳನ್ನು ತುಂಬಾ ಮುತುವರ್ಜಿಯಿಂದ ನೋಡಿಕೊಳ್ಳುತಿದ್ದಳು.. ಅವಳ ಆರೋಗ್ಯ ಪೂರ್ಣ ಕಾಂತಿಯುಕ್ತ ದೇಹ, ಕಳೆಕಳೆಯಾಗಿದ್ದ ಮುಖವನ್ನು ನೋಡಿದಾಗಲೆಲ್ಲ ತನ್ನ ನಿಸ್ತೇಜ ಮುಖ ಕಂಡು ಬೇಸರಪಟ್ಟುಕೊಳ್ಳುತಿದ್ದಳು ಗಿರಿಜಾ.. ಇಬ್ಬರಿಗೂ ಹೆರಿಗೆಯ ಸಮಯ ಹತ್ತಿರವಾಗುತಿತ್ತು. ಗಿರಿಜಾಳ ದೇಹ ಸ್ಥಿತಿ ಈಗ ತುಂಬಾ ಸುಧಾರಿಸಿತ್ತು. ತಾಯ್ತನದ ಕಳೆ ಮೊಗದಲ್ಲಿ ರಾರಾಜಿಸುತಿತ್ತು. ಹದಿನೈದು ದಿನಗಳ ಅಂತರದಲ್ಲಿ ಇಬ್ಬರಿಗೂ ಹೆರಿಗೆ ಸಮಯ ನಿಗದಿಯಾಗಿತ್ತು.

ಅದೊಂದು ದಿನ ಬೆಳಗಿನ ಜಾವ ಗಿರಿಜಾಳಿಗೆ ಇದ್ದಕ್ಕಿದ್ದಂತೆ ಕಿಬ್ಬೊಟ್ಟೆ ನೋವು ಕಾಣಿಸಿಕೊಂಡಿತು. ಬಿಟ್ಟು ಬಿಟ್ಟು ಬರುತ್ತಿದ್ದ ನೋವು ಹುಸಿನೋವಿರಬೇಕು ಎಂದುಕೊಂಡಿದ್ದು ಸುಳ್ಳಾಗಿ ಬಿಟ್ಟಿತು. ಆಸ್ಪತ್ರೆಗೆ ದಾಖಲಿಸುವುದು ಅನಿವಾರ್ಯವಾಯಿತು. ಪಾರ್ವತಿ ಕೂಡ ಹಿಂದಿನ ದಿನ ರಾತ್ರಿಯೇ ಆಸ್ಪತ್ರೆಗೆ ಸೇರಿದ್ದಳು, ಅವಳಿಗಿನ್ನೂ ಹೆರಿಗೆಯಾಗಿರಲಿಲ್ಲ. ಅದೇನು ದೇವರ ಮಾಯೆಯೋ ಇಬ್ಬರಿಗೂ ಹತ್ತು ನಿಮಿಷಗಳ ಅಂತರದಲ್ಲಿ ಮಕ್ಕಳು ಜನಿಸಿದವು. ಪಾರ್ವತಿ ಮತ್ತೊಮ್ಮೆ ಮುದ್ದಾದ ಗಂಡು ಮಗುವಿಗೆ ಜನ್ಮ ವಿತ್ತರೆ, ಗಿರಿಜಾ ಹೆಣ್ಣು ಮಗುವಿಗೆ ಜನ್ಮ ವಿತ್ತಿದ್ದಳು.. ವಿಧಿ ಬರಹ..! ಆ ಮಗು ಹುಟ್ಟುವಾಗಲೇ ಸತ್ತಿತ್ತು..

ರಾಮಚಂದ್ರ ಕಂಗಲಾದ. ಇಷ್ಟು ವರ್ಷಗಳ ಕಾಯುವಿಕೆ, ಗಿರಿಜಾಳ ಕನಸಿನ ಕೂಸು ಹುಟ್ಟುವಾಗಲೇ ಕಣ್ಣು ಮುಚ್ಚಿತ್ತು. ಸತ್ತ ಮಗುವಿಗಿಂತಲೂ ತನ್ನ ಹೆಂಡತಿಯ ಭವಿಷ್ಯವೇ ಭೂತಾಕಾರವಾಗಿ ಕಾಡತೊಡಗಿತು. ತಲೆಯಲ್ಲಿ ಒಂದು ಯೋಚನೆ, ಯೋಜನೆ ನುಸುಳಿಯೇ ಬಿಟ್ಟಿತು. ಸರಿ, ತಪ್ಪು ವಿಮರ್ಶಿಸುವ ಸಮಯವಾಗಿರಲಿಲ್ಲ ಅದು. ಹಿರಿಯನ ಕಾಲುಗಳನ್ನು ಹಿಡಿದು ಅಂಗಲಾಚಿದ. ತನ್ನ ಒಡೆಯ ಅದಕ್ಕಿಂತಲೂ ಹೆಚ್ಚಾಗಿ ಆತ್ಮೀಯ ಸ್ನೇಹಿತನಂತಿದ್ದ ರಾಮಚಂದ್ರನ ಸ್ಥಿತಿ ನೋಡಿ ಹಿರಿಯನ ಹೃದಯ ಕರಗಿತು. ಅವನ ಸ್ವಾಮಿ ನಿಷ್ಠೆಯೋ! ಸ್ನೇಹ ಬಂಧವೋ ! ಕರುಳಿನ ಸೆಳೆತವೋ...! ಕ್ಷಣ ಹೊತ್ತು ಹೊಯ್ದಾಡಿತು ಮನ. ಆದರೆ ಗಟ್ಟಿಯಾದ ಸ್ನೇಹ ಸಂಬಂಧದ ಮುಂದೆ #ಮನಸ್ಸನ್ನು#ಕಲ್ಲು ಮಾಡಿಕೊಳ್ಳಲೇ#ಬೇಕಿತ್ತು#... ನಡುಗುವ ಕೈಗಳಿಂದ ತನ್ನ ಪಾರ್ವತಿಯ ಪಕ್ಕ ಮಲಗಿಸಿಟ್ಟಿದ್ದ ತನ್ನ ಹಸುಗೂಸನ್ನು ಗಿರಿಜಾಳ ಪಕ್ಕದಲ್ಲಿ ಮಲಗಿಸಿದ.. ಅಷ್ಟು ಹೊತ್ತಿಗಾಗಲೇ ಈ ರಹಸ್ಯ ಹೊರ ಹೋಗದಂತೆ ದಾದಿಯರ ಬಾಯಿ ಮುಚ್ಚಿಸಿದ್ದ ರಾಮಚಂದ್ರ.... ಪಾರ್ವತಿಗೆ ಎಚ್ಚರ ಬರುತಿದ್ದ ಹಾಗೆ ಸತ್ತ ಮಗುವನ್ನು ತೋರಿಸಿ ಅವಳೊಂದಿಗೆ ತಾನೂ ಗೋಳಾಡಿದ ಹಿರಿಯ.

ಮಗುವಿಗೆ 'ಶ್ರೀಧರ' ಎಂದು ನಾಮಕರಣ ಮಾಡಿದರು. ಆ ಅಭಾಗ್ಯ ತಾಯಿಯ ಕರುಳಿನ ಕೂಗು ದೇವರಿಗೆ ಕೇಳಿಸಿತಿರಬೇಕು. ಗಿರಿಜಾಳ ಎದೆಯಲ್ಲಿ ಮಗುವಿಗೆ ಸಾಕಾಗುವಷ್ಟು ಹಾಲು ಉಕ್ಕಲೇ ಇಲ್ಲ. ಪಾರ್ವತಿಯ ಎದೆಯಲ್ಲಿ ಹಾಲುಕ್ಕಿ ಅವಳು ತೀವ್ರ ಸಂಕಟ ಪಡುತಿದ್ದಳು.. ಅವಳ ಸಂಕಟ ನೋಡಲಾರದೇ ಗಿರಿಜಾಳೇ ಮಗುವನ್ನು ಅವಳ ಕೈಗೆ ಕೊಟ್ಟು ಹಾಲುಣಿಸಲು ಹೇಳಿದ್ದಳು. ಇಬ್ಬರು ಅಮ್ಮಂದಿರ ಆರೈಕೆಯಲ್ಲಿ ಚೆನ್ನಾಗಿ ಬೆಳೆಯತೊಡಗಿದ ಶ್ರೀಧರ. ಅವನ ಅದೃಷ್ಟ ನೋಡಿ, ದೂರದಲ್ಲೇ ನಿಂತು ಸಂತಸಪಡುತಿದ್ದ ಹಿರಿಯ.. ಸತ್ಯವನ್ನು ಮುಚ್ಚಿಡಲು ಅದೆಷ್ಟು ಗಟ್ಟಿ ಮನಸ್ಸು ಮಾಡಿಕೊಂಡಿದ್ದನೋ ಆ ದೇವರಿಗೇ ಗೊತ್ತು.

ಬಾಲ್ಯದ ಹುಡುಗಾಟದಲ್ಲಿ ಶ್ರೀಧರ ಹಿರಿಯನ ಜೊತೆ ದರ್ಪದಿಂದ ನಡೆದುಕೊಂಡರೆ ಅಥವಾ ಕೀಳಾಗಿ ವರ್ತಿಸಿದರೆ ಜೋರಾಗಿ ಗದರಿಬಿಡುತಿದ್ದ ರಾಮಚಂದ್ರ. ಹಾಗಾಗಿ ಶ್ರೀಧರ ಬೆಳೆಯುತಿದ್ದ ಹಾಗೆ ಆ ಮನೆಯ ನಯ, ವಿನಯ, ಸಂಸ್ಕಾರವನ್ನು ತನ್ನಲ್ಲಿ ಮೈಗೂಡಿಸಿಕೊಂಡಿದ್ದ.

ಎರಡು ವರ್ಷ ಕಳೆಯುವಷ್ಟರಲ್ಲಿ ಪಾರ್ವತಿಗೆ ಮತ್ತೊಂದು ಹೆಣ್ಣು ಮಗು ಜನಿಸಿತು. ಹೆರಿಗೆ ಸಮಯದಲ್ಲಿ ಗಿರಿಜಾಳ ಗರ್ಭಕೋಶಕ್ಕೆ ಏನೋ ತೊಂದರೆಯಾದ್ದರಿಂದ ಮತ್ತೆ ಮಕ್ಕಳಾಗುವ ಸಾಧ್ಯತೆಯಿರಲಿಲ್ಲ.

ಕಾಲವುರುಳಿತು. ಹಿರಿಯನ ಹಿರಿ ಮಗನಿಗೆ ಮದುವೆಯಾಗಿ ಬೇರೆಡೆ ಸಂಸಾರ ಹೂಡಿದ್ದ ಮಗಳಿಗೂ ಮದುವೆಯಾಗಿತ್ತು...

ಶ್ರೀಧರನಿಗೂ ಮದುವೆಯಾಗಿ ಮಕ್ಕಳಾಗಿದ್ದರು. ಮುಪ್ಪು ಕಾಣಿಸಿಕೊಳ್ಳುತಿದ್ದ ಹಾಗೆ ರಾಮಚಂದ್ರ ಸಂಪೂರ್ಣ ವ್ಯವಹಾರವನ್ನು ಶ್ರೀಧರನಿಗೆ ಒಪ್ಪಿಸಿ ಬಿಟ್ಟಿದ್ದ. ರಾಮಚಂದ್ರ ಮತ್ತು ಹಿರಿಯರಿಬ್ಬರಿಗೂ ಎಂಬತ್ತರ ಇಳಿ ವಯಸ್ಸು. ಇತ್ತೀಚೆಗೆ ಹಿರಿಯ ಹೆಂಡತಿಯೊಂದಿಗೆ ಮಗಳ ಮನೆಯಲ್ಲೇ

ಇರುತಿದ್ದ. ಅಲ್ಲಿ ಅಳಿಯನಿಗೂ ಅಪ್ಪ, ಅಮ್ಮ ಇರದ ಕಾರಣ ಇವರನ್ನು ತನ್ನ ಹೆತ್ತವರ ಹಾಗೆ ನೋಡಿಕೊಳ್ಳುತಿದ್ದ.

ಶ್ರೀಧರನದೇ ಒತ್ತಾಯ.. ಈ ವಯಸ್ಸಿನಲ್ಲಿ ಗಂಡ, ಹೆಂಡತಿ ಇಬ್ಬರೂ ಗಟ್ಟಿ ಮುಟ್ಟಾಗಿ, ಜೊತೆಯಾಗಿ ಇರುವ ಅದೃಷ್ಟ ಎಷ್ಟು ದಂಪತಿಗಳಿಗೆ ಸಾಧ್ಯ..! "ಸಹಸ್ರಚಂದ್ರ ದರ್ಶನ" ಕಾರ್ಯಕ್ರಮ ಮಾಡಿಸಲೇ ಬೇಕೆಂದು ಹಠ ಹಿಡಿದು ಎಲ್ಲ ತಯಾರಿ. ಮಗ, ಸೊಸೆ, ಮೊಮ್ಮಕ್ಕಳ ಒತ್ತಾಸೆಗೆ ಕಟ್ಟು ಬಿದ್ದು ಈ ಸಂಭ್ರಮಕ್ಕೆ ಒಪ್ಪಿಗೆ ಕೊಟ್ಟಾಗಿದೆ. ಹಾಗೆಯೇ ಹಿರಿಯನ ಕುಟುಂಬವನ್ನೂ ಕರೆಸಿಕೊಂಡಿದ್ದಾನೆ.

"ಹಿರಿಯಾ.... ಪಾರ್ವತಿ... ಕರೆದಿದ್ದು ಕೇಳಿಸಿಲ್ವಾ" ಹತ್ತಿರದಲ್ಲೇ ಬಾಂಬ್ ಸಿಡಿತದಂತೆ ಗಟ್ಟಿಯಾಗಿ ಕೇಳಿ ಬಂದ ಧ್ವನಿಗೆ ಬೆಚ್ಚಿದ ಹಿರಿಯ. ನೆನಪುಗಳನ್ನು ಕೊಡವಿ ವಾಸ್ತವಕ್ಕೆ ಬಂದ. ಆತ್ಮೀಯತೆಯಿಂದ ಹಿರಿಯನ ಹೆಗಲು ಬಳಸಿದ ರಾಮಚಂದ್ರ...ಒಬ್ಬರಿಗೊಬ್ಬರು ಊರುಗೋಲಾಗಿ ಹೋಮ ಕುಂಡದೆಡೆ ಹೆಜ್ಜೆ ಹಾಕಿದರು.. "ಪಾರ್ವತಿಯ ಮಾತೃತ್ವಕ್ಕೆ ಅನ್ಯಾಯ ಮಾಡಿದೆನೇನೋ" ಎಂದು ಇಷ್ಟು ವರ್ಷಗಳಿಂದ ಅಪರಾಧಿ ಪ್ರಜ್ಞೆಯಿಂದ ನರಳುತಿದ್ದ ರಾಮಚಂದ್ರ ಇಂದು ನಿರಾಳತೆಯಿಂದ ಉಸಿರಾಡಿದ. "ಈ ವಂಶಕ್ಕೆ ತನ್ನ ಮಗುವನ್ನು ಕೊಟ್ಟಿದ್ದು ವ್ಯರ್ಥವಾಗಲಿಲ್ಲವಲ್ಲ" ಎಂಬ ಸಾರ್ಥಕತೆಯ ಭಾವ ಹಿರಿಯನ ಮನದಲ್ಲಿ ಮೂಡಿತು.

---

## ವಿಶಾದ

ಇದೇ ಜುಲೈ 1ರಂದು ನಮ್ಮ ಅಸೋಸಿಯೇಶನ್ನಿನ ಹಿರಿಯ ಸದಸ್ಯರಾದ ಡಾ. ಲೀಲಾ ಜೋಯಿಸ್ ಅವರು ವಿಧಿವಶರಾದರೆಂದು ತಿಳಿಸಲು ವಿಶಾದಿಸುತ್ತೇವೆ.

ಡಾ. ಲೀಲಾ ಅವರಿಗೆ ಜುಲೈ 13ಕ್ಕೆ 90 ವರ್ಷವಾಗುತ್ತಿತ್ತು. ಅಷ್ಟರಲ್ಲೇ ಅವರು ಈ ಲೋಕ ಬಿಟ್ಟು ನಡೆದರು. ಕೊನೆಯ ಒಂದು ತಿಂಗಳು ಸ್ವಲ್ಪ ಆರೋಗ್ಯ ಸರಿ ಇರಲಿಲ್ಲ.

ಅಸೋಸಿಯೇಶನ್‌ನ ಶತಮಾನದ ಸಮಾರಂಭದ ಸಂಜೆಯಷ್ಟೇ ಬೆಂಗಳೂರಿನಿಂದ ಹಿಂತಿರುಗಿ ಮುಂಬೈಗೆ ಬಂದಿದ್ದರಿಂದ ಅವರಿಗೆ ಸನ್ಮಾನ ಮಾಡಲು ಮನೆಗೇ ಹೋಗಿದ್ದು ಅವರಿಗೆ ಬಹಳ ಸಂತೋಷವಾಗಿತ್ತು.

ಡಾ. ಲೀಲಾ ಅವರಿಗೆ ಚರಿತ್ರೆ ಆಸಕ್ತಿಯ ವಿಷಯವಾಗಿತ್ತು. ಅವರು ಸಯಾನಿನಲ್ಲಿರುವ ಎಸ್.ಐ.ಇ.ಎಸ್. ಕಲೆ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಗ್ರಂಥಪಾಲಕರಾಗಿ ಬಹಳ ವರ್ಷ ಸೇವೆ ಸಲ್ಲಿಸಿ ನಿವೃತ್ತಿಯಾದರು.

ಅವರು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿದ್ದ ಬಿ. ಎನ್. ಶ್ರೀಕೃಷ್ಣ ಅವರ ಚಿಕ್ಕಮ್ಮ, (ತಾಯಿಯವರ ತಂಗಿ), ಅವರೊಡನೆಯೇ ಇರುತ್ತಿದ್ದರು.

ಮೃತರ ಆತ್ಮಕ್ಕೆ ಸದ್ಗತಿ ದೊರಕಲಿ ಮತ್ತು ಅವರ ಬಂಧು ಬಳಗದವರಿಗೂ, ಸ್ನೇಹಿತರಿಗೂ ಈ ವಿಯೋಗವನ್ನು ಭರಿಸುವ ಶಕ್ತಿ ಬರಲಿ ಎಂದು ಪ್ರಾರ್ಥಿಸುತ್ತೇವೆ.

**ಮೈಸೂರು ಅಸೋಸಿಯೇಷನ್ನಿನ ಅಧ್ಯಕ್ಷರು ಹಾಗೂ ಕಾರ್ಯಕಾರಿ ಸಮಿತಿ**



**ಡಾ. ಲೀಲಾ ಜೋಯಿಸ್**

*ಪುಟ 3 ರಿಂದ......*

ಕಷ್ಟದ ಅರಿವು ಆಗುತ್ತದೆ. ಎಲ್ಲವನ್ನೂ ನೀವು ರೆಡಿಮೇಡ್ ಮಾಡಿ ಕೊಟ್ಟರೆ ಜೀವನದಲ್ಲಿ ಪಡಬೇಕಾದ ಕಷ್ಟದ ಅನುಭವವೇ ಆಗೋದಿಲ್ಲ.

ಇವತ್ತಿನ ತಂತ್ರಜ್ಞಾನ ಯುಗದಲ್ಲಿ ಮಕ್ಕಳನ್ನು ಒಳ್ಳೆಯ ಸಂಸ್ಕಾರ ಕೊಟ್ಟು ಬೆಳೆಸುವುದು ಎಲ್ಲ ತಂದೆ ತಾಯಿಯಂದಿರರಿಗೂ ಒಂದು ಚಾಲೆಂಜಿಗ್ ಆಗಿದೆ. ಮಾಡಬೇಕಾಗಿರೋದು ಇಷ್ಟೇ, ಅವರ ನಡೆನುಡಿಗಳ ಬಗ್ಗೆ ಸದಾ ಗಮನವನ್ನು ಕೊಡಬೇಕು. ಎಲ್ಲವನ್ನೂ ಇತಿಮಿತಿಯಲ್ಲಿ ಇರುವಂತೆ ನೋಡಿಕೊಳ್ಳಬೇಕು. ಮಕ್ಕಳೊಂದಿಗೆ ಮಕ್ಕಳಾಗಿ ಬೆರೆಯಿರಿ. ದೊಡ್ಡವರಾಗುತ್ತಾ ಹೋದ ಹಾಗೆ ಅವರನ್ನು ಸ್ನೇಹಿತರಾಗಿ ನೋಡಿ. ಅವರೆಷ್ಟು ನಿಮ್ಮ ಜೀವನಕ್ಕೆ ಪ್ರಮುಖರು ಎನ್ನುವುದನ್ನು ತೋರಿಸಿಕೊಡಿ. ಅವರ ಪ್ರತಿಯೊಂದು ಆದ್ಯತೆ ನಮಗೆ ತುಂಬಾ ಮುಖ್ಯ ಅನ್ನೋದನ್ನು ಅವರು ತಿಳಿದುಕೊಳ್ಳುವ ಹಾಗೆ ಮಾಡಿ. ಪ್ರಪಂಚದ ಎಲ್ಲ ಜೀವಿಗಳಲ್ಲಿ ಶ್ರೀಕೃಷ್ಣ ನೆಲೆಸಿದ್ದಾನೆ. ಹಾಗಾಗಿ ಪ್ರತಿಯೊಂದು ಜೀವಿಯನ್ನು ಪ್ರೀತಿಸಬೇಕು. ಯಾರಿಗೂ ನೋವನ್ನು ಕೊಡಬಾರದು ಅನ್ನೋದನ್ನು ಕೂಡ ಚಿಕ್ಕವರಿರುವಾಗಲೇ ಕಲಿಸಬೇಕು. ಆಗ ಮಾತ್ರ ಇವತ್ತಿನ ದಿನಗಳಲ್ಲಿ ನಡೆಯುವ ಕೊಲೆ, ಅತ್ಯಾಚಾರಗಳನ್ನು ಸ್ವಲ್ಪಮಟ್ಟಿಗಾದರೂ ನಿಯಂತ್ರಿಸಬಹುದು.

# ದುಡ್ಡಿನ ಜಾದೂ ಪೆಟ್ಟಿಗೆ (ATM)



✍ ಶಶಿಕಾಂತ ಜೋಶಿ

ಲಂಡನ್ನಿನ ಒಂದು ಜನನಿಬಿಡ ರಸ್ತೆಯಲ್ಲಿ ಒಬ್ಬ ಮನುಷ್ಯ ಬ್ಯಾಂಕಿನ ಕಡೆಗೆ ಓಡುತ್ತಿದ್ದ, ದುಡ್ಡು ತೆಗೆಸಿಕೊಳ್ಳಲಿಕ್ಕೆ. ಆವಾಗ ಬ್ಯಾಂಕ್ ಮುಚ್ಚುವ ಸಮಯವಾಗಿತ್ತು. ಅಲ್ಲದೆ ಈ ದಿನ ಅವನು ದುಡ್ಡು ತೆಗೆಸಿಕೊಳ್ಳದಿದ್ದರೆ ಮುಂದೆ ಎರಡು ದಿನ ಬ್ಯಾಂಕ್‌ಗೆ ರಜೆ. ಅವನು ಓಡುತ್ತಾ ಹೋಗಿ ಬ್ಯಾಂಕಿಗೆನೋ ತಲುಪಿದ. ಆದರೆ ಬ್ಯಾಂಕ್ ಒಂದು ಗಳಿಗೆ ಕೆಳಗಷ್ಟೇ ಮುಚ್ಚಿ ಆಗಿತ್ತು. ಹತಾಶನಾಗಿ ಅವನು ಅಲ್ಲಿಯೇ ಕುಳಿತ. ಅವನ ಲೆಕ್ಕಾಚಾರವೆಲ್ಲ ತಲೆ ಕೆಳಗಾಗಿತ್ತು. ಅವನ ಈ ರೀತಿಯ ಪರಿಸ್ಥಿತಿ ಒಂದು ಹೊಸ ಕ್ರಾಂತಿಯ ಉಗಮ ಎಂದು ಯಾರೇ ಆಗಲಿ ಅಥವಾ ಅವನು ಸಹ ಊಹಿಸಿರಲಿಕ್ಕಿಲ್ಲ. ಅವನೇ ಸಂಶೋಧಕ John Shepherd-Barron (1925–2010). ಇವರು ಹುಟ್ಟಿದ್ದು ಭಾರತದ ಮೇಘಾಲಯದ Shillongನಲ್ಲಿ.




ಆ ದಿನ ಅವನಿಗೆ ದುಡ್ಡೇನೋ ಸಿಗಲಿಲ್ಲ ಮತ್ತು ಖಿನ್ನ ಮನಸ್ಸಿನಿಂದ ಮನೆಗೆ ಹೋಗಿ ಹೆಂಡತಿ Caroline ಮುಂದೆ ತನ್ನ ಅಳಲನ್ನು ತೋಡಿಕೊಂಡ. ಅವಳು ಅವನಿಗೆ ಹೇಳಿದಳು, "ಆದದ್ದು ಆಯಿತು, ಏನಾದರೂ ಉಪಾಯ ಹುಡುಕು" ಎಂದು ಪ್ರೇರೇಪಿಸಿದಳು. ಇಂಗ್ಲೀಷ್‌ನಲ್ಲಿ ಒಂದು ಗಾದೆ ಇದೆ. "Necessity is the mother of invention". ಅವರು ವಿಚಾರ ಮಾಡಿದಾಗ ಒಂದು ವಿಷಯ ಅವರ ಗಮನಕ್ಕೆ ಬಂತು. ಅಂದಿನ ದಿನಗಳಲ್ಲಿ (60ರ ದಶಕದಲ್ಲಿ) ಆ ದೇಶದ ಪ್ರಮುಖ ಸ್ಥಳಗಳಲ್ಲಿ ದುಡ್ಡು ಒಂದು ಪೆಟ್ಟಿಗೆಯಲ್ಲಿ ಹಾಕಿದರೆ ಒಂದು ಹಾಲಿನ (Milk) ಪ್ಯಾಕೆಟ್ ಆಗಲಿ ಅಥವಾ ಚಾಕೊಲೇಟ್ ಆಗಲಿ ಅಥವಾ ತಂಪು ಪಾನೀಯ (Cold Drink bottle) ಅಥವಾ ನಿಮಗೆ ಬೇಕಾದ ಹಾಡು ಕೇಳಬಹುದಿತ್ತು. ಇದೇ ರೀತಿ ದುಡ್ಡು ಸಹ ಯಾಕೆ ಬರಬಾರದು ಅಂತ ವಿಚಾರ ಮಾಡಿದರು. ಈ ತನ್ನ ವಿಚಾರವನ್ನು Barclays Bankನ ವ್ಯವಸ್ಥಾಪಕರಿಗೆ ಕೂಡ ತಿಳಿ ಹೇಳಿದ. ಅವರಿಗೆ ಇವನ ವಿಚಾರ ಹಿಡಿಸಿತು. ಮತ್ತು ಅವರಿಗೆ ಇದನ್ನು ಕಾರ್ಯರೂಪಕ್ಕೆ ತರಲು ಅನುಮತಿ ಕೊಟ್ಟರು. ಬಹಳ ಪರಿಶ್ರಮ ಹಾಗೂ ಸಮಯದ ನಂತರ ಅವರ ಶ್ರಮಕ್ಕೆ ಪ್ರತಿಫಲ ಸಿಕ್ಕಿತು. 27th June 1967ರ ದಿನ ಜಗತ್ತಿನಲ್ಲಿಯೇ ಸುವರ್ಣಾಕ್ಷರದಿಂದ ಬರೆದಿಡುವ ದಿನ. ಆದಿನ Barclays Bankನ ಒಂದು ಶಾಖೆ ಉತ್ತರ ಲಂಡನ್ನಿನ Enfieldನಲ್ಲಿ ATM (Automated Teller Machine) ಕೂಡಿಸಲಾಯಿತು. ಅದರಿಂದ 10 ಪೌಂಡ್ ದುಡ್ಡನ್ನು ಮಾತ್ರ ತೆಗೆಯಲಾಯಿತು. ಎಲ್ಲರಿಗೂ ಗೊತ್ತಿರುವ ಹಾಗೆ ಬ್ಯಾಂಕ್‌ನಿಂದ ದುಡ್ಡನ್ನು ತೆಗೆಯಬೇಕಾದರೆ Cheque leaf (ಕಾಗದದ ಸಣ್ಣ ಹಾಳೆ)ದಲ್ಲಿ ಬೇಕಾದ ದುಡ್ಡಿನ ಮೊತ್ತವನ್ನು ಬರೆದು ಸಹಿ ಮಾಡಿ, ಬ್ಯಾಂಕ್‌ನ ಲೆಕ್ಕಾಧಿಕಾರಿಗಳಿಗೆ ಕೊಟ್ಟರೆ, ಅದನ್ನು ಅವರು ಪರಿಶೀಲಿಸಿ ದುಡ್ಡನ್ನು ಕೊಡುವ ಪದ್ಧತಿ. ಮೊದಮೊದಲು ಈ ವ್ಯವಸ್ಥೆ ಚೆನ್ನಾಗಿಯೇ ನಡೆದಿತ್ತು. ಆದರೆ ಯಾವಾಗ ಬ್ಯಾಂಕ್‌ನಲ್ಲಿ ಖಾತೆದಾರರ ಸಂಖ್ಯೆ ಹೆಚ್ಚಾಯಿತೋ ಹಾಗೂ ಎಲ್ಲರ ಸಂಬಳ ಬ್ಯಾಂಕ್‌ನಲ್ಲಿ ಜಮಾ ಮಾಡತೊಡಗಿದರೋ ಆವಾಗ ಜನರು ತಿಂಗಳಿನ ಸಂಬಳ ತೆಗೆದುಕೊಳ್ಳಲಿಕ್ಕೆ ಬ್ಯಾಂಕ್‌ಗೆ ಬರತೊಡಗಿದರು. ಈಗ ಬ್ಯಾಂಕ್ ಮುಂದೆ ಜನರ ಸರತಿಯ ಸಾಲು ದುಡ್ಡು ತೆಗೆಸಲಿಕ್ಕೆ. ಆದರೆ ಬ್ಯಾಂಕ್ ವೇಳೆ ಸೀಮಿತ (ಸಾಧಾರಣ ಬೆಳಿಗ್ಗೆ 4ರಿಂದ 5 ತಾಸು ಮಾತ್ರ) ದುಡ್ಡು ತೆಗೆಸಿದರೂ ಅದನ್ನು ಮನೆಗೆ ತಲುಪಿಸಲಿಕ್ಕೆ ಹರಸಾಹಸ ಪಡುತ್ತಿದ್ದರು. ಕಳ್ಳರು pickpocket (Bus, trainನಲ್ಲಿ) ಮಾಡುತ್ತಿದ್ದರು ಅಥವಾ ಅವರೇ ಮರೆತು ಎಲ್ಲಿಯೋ ಇಟ್ಟು



ಮರೆತುಬಿಡುತ್ತಿದ್ದರು ಅಥವಾ ಇನ್ನೇನೋ (ನಂತರ ಇಡೀ ತಿಂಗಳು ಹೆಚ್ಚು ಕಡಿಮೆ ಉಪವಾಸ).

ಇನ್ನೊಂದು ರೋಚಕ ಸಂಗತಿ ಮುಂಬಯಿಯದ್ದು. ಮುಂಬಯಿಯ ಆಫೀಸಿನ ಸಾವಿರಾರು ಜನರು ಮನೆಯಿಂದ ಊಟ ತರಿಸುತ್ತಿದ್ದರು. ಅದನ್ನು ತರುವವರಿಗೆ ಡಬ್ಬಾವಾಲಾ ಅಂತ ಹೆಸರು. ಡಬ್ಬಾವಾಲಾಗಳು ಪ್ರತಿಯೊಬ್ಬರ ಮನೆಯಿಂದ ಅವರ ಅಡುಗೆಯನ್ನು officeನಲ್ಲಿ local train ಮುಖಾಂತರ ತಲುಪಿಸಿ, ಊಟ ಮಾಡಿದ ನಂತರ ಖಾಲಿ ಡಬ್ಬವನ್ನು ತಿರುಗಿ ಅವರ ಮನೆಗೆ ತಲುಪಿಸುತ್ತಿದ್ದರು. ಅವರು ಬಹಳ ನಿಯತ್ತಿನಿಂದ ತಮ್ಮದೇ ಆದ code ಮುಖಾಂತರ ಕರಾರುವಾಕ್ಕಾಗಿ ಕೆಲಸ ಮಾಡುತ್ತಿದ್ದರು. ಇದಕ್ಕೆ ವಿಶ್ವದ ಮನ್ನಣೆಯೂ ಸಹ ಸಿಕ್ಕಿದೆ. ಕೆಲ ಬುದ್ಧಿವಂತ ಜನರು ತಿಂಗಳಿನ ಸಂಬಳವನ್ನು ಖಾಲಿ ಊಟದ ಡಬ್ಬಿಯಲ್ಲಿ ಇಟ್ಟು ಕಳುಹಿಸುತ್ತಿದ್ದರು. ಆ ದುಡ್ಡೂ ಸುರಕ್ಷಿತವಾಗಿ ಮನೆ ಮುಟ್ಟುತ್ತಿತ್ತು. ಈ ರೀತಿಯ ರೋಚಕ ಸಂಗತಿಗಳು ಬೇಕಾದಷ್ಟಿವೆ.

ಮೊದಮೊದಲು ವಿಶಿಷ್ಟ ರಾಸಾಯನಿಕ ಲೇಪಿತ Cheque leaf ಉಪಯೋಗಿಸುತ್ತಿದ್ದರು. (ಈಗಿನ ಹಾಗೆ plastic card ಇರಲಿಲ್ಲ)




ದುಡ್ಡನ್ನು ಅದೇ ಬ್ಯಾಂಕ್‌ನಲ್ಲಿ ಹಾಗೂ ನಿರ್ದಿಷ್ಟ ಮೊತ್ತ (ಕೇವಲ 10 Pound ಮಾತ್ರ) ತೆಗೆಯಲು ಅನುಮತಿ ಕೊಡಲಾಗಿತ್ತು ಮತ್ತು ಅದರ ಸಂಗಡ ಸುರಕ್ಷತೆಯ ಅಂಗವಾಗಿ 6 ಅಂಕೆಗಳ ಗುಪ್ತ code (PIN) ಬಳಸಲು ಕಡ್ಡಾಯ ಮಾಡಿದರು. ಆದರೆ ಅವರ ಹೆಂಡತಿ Caroline "ಅಯ್ಯೋ 6 ಅಂಕೆಯ ಸಂಖ್ಯೆ ಯಾರಿಗೂ ಬೇಗ ನೆನಪಾಗಲ್ಲ, ಕಡಿಮೆ ಮಾಡಿ ಅಂದಾಗ ಅದನ್ನು 4 ಅಂಕೆಯ ಗುಪ್ತ codeಗೆ ವರ್ಗಾಯಿಸಲಾಯಿತು. ಈಗಲೂ ವಿಶ್ವದೆಲ್ಲೆಡೆ 4 ಅಂಕೆಯ PIN ಅನ್ನು ಬಳಸಲಾಗುತ್ತದೆ. ಮೊದಲು ಪ್ರತಿ ದುಡ್ಡಿನ ವ್ಯವಹಾರದ ನಂತರ ಅತಿ ಕನಿಷ್ಠ ಮೊತ್ತವನ್ನೂ Bank Charge ಅಂತ ತೆಗೆದುಕೊಳ್ಳುತ್ತಿದ್ದರು. ಕಾಲಕ್ರಮೇಣ ಅದು ನಿಂತು ಹೋಯಿತು. ನಂತರ ದುಡ್ಡಿನ ಪ್ರಮಾಣವನ್ನು ಸಹ ಹೆಚ್ಚಿಸಿದರು ಅಲ್ಲದೆ ಅದೇ ಬ್ಯಾಂಕಿನ Card ಅನ್ನು ಬೇರೆ ಬೇರೆ ಬ್ಯಾಂಕಿನ ATM ನಲ್ಲೂ (Inter Bank System) ಉಪಯೋಗಿಸ ಬಹುದು ಎಂದು ಮಾರ್ಪಾಡು ಮಾಡಿದರು. ಕಾಲಾಂತರದಲ್ಲಿ (90ರ ದಶಕದಲ್ಲಿ) ಅದರಲ್ಲಿ ಮಾರ್ಪಾಡುಗಳನ್ನೂ ಮಾಡಿ Plastic Cardನ್ನು ಬಳಕೆಗೆ ತಂದರು. ಅದರಲ್ಲಿ electronic chip ಅನ್ನು ಅಳವಡಿಸಿದರು. ಆ Chipನಲ್ಲಿ ಬ್ಯಾಂಕಿನ ಹೆಸರು, Account Number, ಖಾತೆದಾರರ ಹೆಸರು ಇನ್ನಿತರೇ ಮಾಹಿತಿಯನ್ನು ಸಂಗ್ರಹ ಮಾಡಲಾಯಿತು. ಆದರೆ ಖಾತೆದಾರರ 4 ಅಂಕೆಯ PIN ಅನ್ನೂ ಕಡ್ಡಾಯ ಮಾಡಿದರು. ಅದು ಈಗಲೂ ಪ್ರಚಲಿತದಲ್ಲಿದೆ.




ನಮ್ಮ ಭಾರತದಲ್ಲಿ ATM ಅನ್ನು ಮೊದಲು HSBC Bank ಅವರು ಪ್ರಸ್ತುತ ಪಡಿಸಿದರು. 1987ರಲ್ಲಿ Andheri (E) Sahara (BR) ಮುಂಬಯಿಯಲ್ಲಿ ಪ್ರಾರಂಭಿಸಲಾಯಿತು. ಅಗಿನ ಭಾರತದ ಪ್ರಧಾನಿ ದಿ। ಶ್ರೀ

ರಾಜೀವ ಗಾಂಧಿಯವರು ATM ಅನ್ನು Delhiಯಲ್ಲಿ 1988ರಲ್ಲಿ ಉದ್ಘಾಟಿಸಿದರು. ಅವಾಗ ಬ್ಯಾಂಕ್ ಕರ್ಮಚಾರಿಗಳು ಇದನ್ನು ವಿರೋಧಿಸಿದರು. ತಾವೆಲ್ಲರೂ ಮುಂಬರುವ ದಿನಗಳಲ್ಲಿ ಕೆಲಸಕೊಳ್ಳುತ್ತೇವೆ ಎಂದು. ವಿಪರ್ಯಾಸ ಅಂದರೆ ಇದಕ್ಕೆ ಬಹುತೇಕ ಎಲ್ಲ ಪಕ್ಷಗಳು ವಿರೋಧಿಸಿದವು. ನಮ್ಮ ಭಾರತದಲ್ಲಿ ATMನ ಮೊದಲ CEO Shri Kumar Krishnan.

ಆದರೆ ಜನ ಸಾಮಾನ್ಯರು ಇದಕ್ಕೆ ಸ್ಪಂದಿಸಿದರು. ಮೊದಲು ಬ್ಯಾಂಕ್‌ನ ಮುಂದೆ ಇದ್ದ ಸರತಿ ಸಾಲು ATMಗೆ ವರ್ಗಾವಣೆ ಆಯಿತು. ATM ಮಹತ್ವ ಎಲ್ಲರಿಗೂ ತಿಳಿಯತೊಡಗಿತು. ಯಾಕೆಂದರೆ ಯಾವಾಗ ಬೇಕಾದಾಗ (ಹಗಲಾಗಲಿ, ರಾತ್ರಿಯಾಗಲಿ) ಎಲ್ಲಿ ಬೇಕಾದಾಗ (ತಮ್ಮ ಊರಿನಲ್ಲಿ ಇರಲಿ ಅಥವಾ ಪರಊರಿನಲ್ಲಿ ಇರಲಿ) ತಮಗೆ ಬೇಕಾದಷ್ಟು ತಮ್ಮ ದುಡ್ಡು ತೆಗೆಯಬಹುದು. ನಮ್ಮವರು ಇದಕ್ಕೆ ಹೆಸರಿಟ್ಟರು ANY TIME MONEY". F ATM ಸುಮಾರು 1970ರಿಂದ ವಿಶ್ವದ ಎಲ್ಲೆಡೆ ಎಲ್ಲ ದೇಶಗಳ ಬ್ಯಾಂಕ್‌ಗಳು ಅಳವಡಿಸಿಕೊಂಡವು. ಅದರಲ್ಲಿ ಕೆಲವೊಂದು ಮಾರ್ಪಾಡುಗಳನ್ನು ಮಾಡಿದರು ಹಾಗೂ ಕೆಲವು ನಿಯಮಗಳನ್ನು ಜಾರಿಗೆ ತಂದರು. ಅದೂ ಅಲ್ಲದೆ ಬೇರೆ ಬೇರೆ ತರಹದ Card ಗಳಾದ Credit Card, Debit Card ಇನ್ನಿತರೆ card ಗಳನ್ನು ಜಾರಿಗೆ ತಂದರು. ನಂತರ Internet Banking transaction ಪದ್ಧತಿಯನ್ನೂ ಸಹ ಅಳವಡಿಸಿದರು.




ಈಗ ವಿಶ್ವದಲ್ಲಿ ಎರಡು ತರಹದ ATM ಗಳಿವೆ.

1) Basic ATM (ಪ್ರಾರಂಭಿಕ ATM) – ಬರೇ ದುಡ್ಡು ತೆಗೆಯಲಿಕ್ಕೆ ಮಾತ್ರ

2) Full Service ATM : (ಸಂಪೂರ್ಣ ATM) – ಇದರಲ್ಲಿ ದುಡ್ಡು ತೆಗೆಯುವುದರ ಸಂಗಡ, ದುಡ್ಡು ತುಂಬುವುದು, Balance ನೋಡುವುದು, ಯಾವುದೇ Bill (Electricity, Gas etc.) ಪಾವತಿಸುವುದು, ಒಂದು ಖಾತೆಯಿಂದ ಇನ್ನೊಂದು ಖಾತೆಗೆ ದುಡ್ಡು ವರ್ಗಾವಣೆ ಮಾಡುವುದು ಇತ್ಯಾದಿ ಒಳಗೊಂಡಿದೆ. ಒಟ್ಟಾಗಿ ಹೇಳುವುದಾದರೆ ಒಂದು ಸಣ್ಣ Branch ಕೆಲಸ ಮಾಡಿದ ಹಾಗೆ.

ATMನ ಇನ್ನೊಂದು ಹೆಸರು Docuteller ಎಂಬ ಕಂಪನಿ ATMನ್ನು ತಯಾರು ಮಾಡಿತ್ತು.

ಈ ATM ಸುಮಾರು 5 ದಶಕಗಳ ಕಾಲ ವಿಶ್ವದೆಲ್ಲೆಡೆ ಭರದಿಂದ ಸಾಗಿತು. (1970ರಿಂದ 2015ರ ತನಕ) ನಮ್ಮ ಭಾರತದಲ್ಲಿ ಸುಮಾರು 2.5 ಲಕ್ಷಕ್ಕಿಂತಲೂ ಹೆಚ್ಚು ATM ಗಳಿವೆ. ಅದರಲ್ಲಿ ಪ್ರಮುಖ ವಿಶ್ವಸನೀಯ ಹಾಗೂ ವಿಶ್ವಾಸಾರ್ಹ ಬ್ಯಾಂಕ್‌ಗಳೆಂದರೆ SBI, HDFC, ICICI ಹಾಗೂ ಇನ್ನಿತರೆ (RBI ಪ್ರಕಾರ) 86% ಹೆಚ್ಚು ATMಗಳು Bankಗಳ ಅಧೀನದಲ್ಲಿದೆ. ಉಳಿದವು ಬೇರೆಯವರ ಮುಖಾಂತರ (Third party Service Provider) ATM ಗಳನ್ನು ನಡೆಸುತ್ತಾ ಇದ್ದಾರೆ (RBI ಪ್ರಕಾರ).

ಸಾಮಾನ್ಯವಾಗಿ ವಿಶ್ವದಲ್ಲಿ ಒಂದು ನಿಯಮವಿದೆ. "ಯಾವುದೇ ಒಂದು ಜೀವಿ ಉದ್ಭವವಾಗುತ್ತೋ ಅಥವಾ ವ್ಯವಸ್ಥೆ ಪ್ರಾರಂಭವಾಗುತ್ತೋ ಅದಕ್ಕೊಂದು ಕೊನೆಗಾಲ ತಾನಾಗಿ ಬರುತ್ತೆ". ಅಂದರೆ ಹೊಸ ಮಳೆ ನೀರು ಹಳೆ ನೀರನ್ನು ಕೊಚ್ಚಿಕೊಂಡು ಹೋದ ಹಾಗೆ, ATMಗೂ ಅನ್ವಯವಾಯಿತು. ಈಗ ಎಲ್ಲರೂ (More than 90%) UPI Transaction ಮಾಡ್ತಾ ಇದ್ದಾರೆ.

UPI ಅಂದರೆ "UNIFIED PAYMENT INTERFACE".

ಇದು ಈ ಶತಮಾನದಲ್ಲಿ ಭಾರತದಿಂದ ವಿಶ್ವಕ್ಕೆ ಕೊಡುಗೆ. ಇದನ್ನು ಭಾರತದ National Payment Corporation of India (NPCI) ಹಾಗೂ RBI ಜೊತೆಗೂಡಿ ಪ್ರಾರಂಭಿಸಿದರು. ಇದರ ಪ್ರಾರಂಭದ ಮೊದಲದಿನ 16th April 2016. ಜಗತ್ತಿನ ಬೇರೆ ಬೇರೆ ದೊಡ್ಡ ಹೆಸರಾಂತ ದೇಶಗಳು ಇದನ್ನು ಆರಂಭಿಸಲು ಹಿಂದು ಮುಂದೆ ನೋಡುತ್ತಿದ್ದಾಗ ಭಾರತ ಸರಕಾರ ಇದನ್ನು ಅನುಷ್ಠಾನಕ್ಕೆ ತಂದು ಜನರಿಗೆ ತೋರಿಸಿ ಅದನ್ನು ಉಪಯೋಗಿಸಲಿಕ್ಕೆ ಹೇಳಿದರು. COVID ಸಮಯದಲ್ಲಿ ಈ UPI ಅತಿ ಪ್ರಸಿದ್ಧಿ ಪಡೆಯಿತು ಎಂದು ಬೇರೆ ಹೇಳಬೇಕಾಗಿಲ್ಲ.

ಯಾಕೆಂದರೆ ಯಾರೂ ಮನೆ ಬಿಟ್ಟು ಹೋಗುವ ಹಾಗಿಲ್ಲ, ಬ್ಯಾಂಕ್‌ಗೂ ಸಹ ಇಲ್ಲ. ಆದರೆ ದಿನ ನಿತ್ಯದ ವ್ಯವಹಾರಕ್ಕೆ ಎಲ್ಲರೂ UPIಗೆ ಮೊರೆ ಹೋಗಬೇಕಾಯಿತು. ಈಗ ಚಹಾ, ಹೂ, ಹಣ್ಣು ತರಕಾರಿ ಮಾರುವವರು ಹಿಡಿದು ಎಲ್ಲರೂ ಉಪಯೋಗಿಸುತ್ತಿದ್ದಾರೆ. ಎಲ್ಲ ಸಣ್ಣ ಅಂಗಡಿ ಹಿಡಿದು ದೊಡ್ಡ Mallಗಳಲ್ಲಿ, Auto, Taxi, Hotel ಇನ್ನಿತರ ದೈನಂದಿನ ವ್ಯವಹಾರದಲ್ಲಿ ಎಲ್ಲರೂ ಉಪಯೋಗಿಸುತ್ತಿದ್ದಾರೆ. ನೀವು ATMನಿಂದ ದುಡ್ಡು ತೆಗೆದುಕೊಂಡು ಹೋಗುವದಾಗಲಿ, ಅಥವಾ Debit Card, Credit Card ಸಹ ಬೇಕಾಗಿಲ್ಲ. ನಿಮ್ಮ ಕಡೆ ಆಧುನಿಕ mobile ಇದ್ದರೆ ಆಯಿತು. ನಿಮ್ಮ mobile ನಿಮ್ಮ ಬ್ಯಾಂಕ್ ಖಾತೆಗೆ ಲಗತ್ತಿಸಿರಬೇಕು ಹಾಗೂ ನಿಮ್ಮ ಖಾತೆಯಲ್ಲಿ ದುಡ್ಡಿರಬೇಕು. ದುಡ್ಡನ್ನು ಬೇರೆಯವರ ಖಾತೆಗೆ ನಿಮ್ಮ mobile ನಿಂದ transfer ಮಾಡಬಹುದು. ಅಥವಾ screenshot ತೆಗೆದು ದುಡ್ಡನ್ನು ಆ ಖಾತೆಗೆ ವರ್ಗಾಯಿಸಲುಬಹುದು. ಇವೆಲ್ಲಕ್ಕೂ ಅಂತರ್ಜಾಲ ಸಂಪರ್ಕ (Internet Compulsory) ಅನಿವಾರ್ಯ. ಭಾರತದಲ್ಲಿ ಈಗಷ್ಟೆ ನಡೆದ ವಿಶ್ವಶೃಂಗ ಸಭೆಯಲ್ಲಿ ನಮ್ಮ ದೇಶದ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು UPI ಹೇಗೆ ಉಪಯೋಗಿಸುತ್ತಾರೆ ಎಂದು ಪ್ರಾತ್ಯಕ್ಷಿಕವಾಗಿ ತೋರಿಸಿಕೊಟ್ಟು ವಿಶ್ವದಲ್ಲಿ ಭಾರತದ ಹಿರಿಮೆಯನ್ನು ಹೆಚ್ಚಿಸಿದ್ದಾರೆ. ಹೀಗಾಗಿ ಆ ದೇಶಗಳಲ್ಲಿಯೂ ಸಹ ಅವರದೇ UPI ಪ್ರಾರಂಭವಾಗಿದೆ ಎಂದು ಬೇರೆ ಹೇಳಬೇಕಾಗಿಲ್ಲ. ಬೇರೆ ಬೇರೆ ದೇಶಗಳಿಗಿಂತ ನಮ್ಮ ಭಾರತದ UPI ವ್ಯವಸ್ಥೆ ಅತಿ ಚೆನ್ನಾಗಿದೆ ಎಂದು ಎಷ್ಟೋ ವಿದೇಶಿ ಜನರು ಹೊಗಳಿದ್ದಾರೆ. ಈ ಆಧುನಿಕ ಯುಗದಲ್ಲಿ ಮುಂದೆ ಏನೇನು ಅವಿಷ್ಕಾರಗಳು ಆಗುತ್ತವೆಯೋ ಆ ಭಗವಂತನಿಗೆ ಮಾತ್ರ ಗೊತ್ತು. ಆದರೆ ಅವೆಲ್ಲವೂ ಮಾನವನಿಂದ ಮಾನವನ ಒಳಿತಿಗಾಗಿ ಹಾಗೂ ಮಾನವನಿಗೆ ಮಾತ್ರ ಎಂಬುದು ಸುಳ್ಳಲ್ಲ. ಈಗ ಈ ಜಾದೂ ಪೆಟ್ಟಿಗೆ ATM Mobileನಲ್ಲಿ ಬಂದಿದೆ ಅಂದರೆ ಆಶ್ವರ್ಯವಲ್ಲದೆ ಮತ್ತೇನು? ●

## ಬಹುಮುಖಿ ಅಂತಾರಾಷ್ಟ್ರೀಯ ಕಾವ್ಯ ಸಮ್ಮಿಲನ
## ಕನ್ನಡ ಸಾಹಿತ್ಯ ಪರಂಪರೆಗೆ ಮುಂಬಯಿ ಸಾಹಿತಿಗಳ ಕೊಡುಗೆ ಅಪಾರ: ಗೋಪಾಲ್ ತ್ರಾಸಿ



ಬಹುಮುಖಿ ಅಂತಾರಾಷ್ಟ್ರೀಯ ಕಾವ್ಯ ಸಮ್ಮಿಲನ –2026 ಕಾರ್ಯಕ್ರಮವು ಜೂ. 26 –28ರ ವರೆಗೆ 3 ದಿನಗಳ ಕಾಲ ಬೆಂಗಳೂರಿನ ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ ಯಶಸ್ವಿಯಾಗಿ ನಡೆಯಿತು.

ಮುಂಬಯಿ ಕವಿ ಗೋಪಾಲ ತ್ರಾಸಿ ಅವರು ಪಾಲ್ಗೊಂಡು ತಮ್ಮ ಕವಿತೆಗಳನ್ನು ವಾಚಿಸಿ, ಖ್ಯಾತ ವಿಮರ್ಶಕಿ ಎಮ್. ಎಸ್. ಆಶಾದೇವಿ ಜೊತೆಗಿನ ಸಂವಾದದಲ್ಲಿ ಪಾಲ್ಗೊಂಡು "ಹೊರನಾಡಿನಲ್ಲಿರುವ ಮುಂಬಯಿ ಸಾಹಿತಿಗಳು ಒಳನಾಡಿನಿಂದ ತುಸು ಅಲಕ್ಷ್ಯಕ್ಕೇ ಒಳಗಾಗಿ ಬಂದಿರುವ ಹಿನ್ನೆಲೆಯಲಿ" ಅಭಿಪ್ರಾಯ ಮಂಡಿಸಿ, ಈ ನಿರ್ಲಕ್ಷ್ಯದ ಮಾತು ಹಿಂದಿನಿಂದಲೂ ಕೇಳಿ ಬರುತ್ತಲೇ ಇತ್ತು. ಈವಾಗಲೂ ಇದೆ. ಕನ್ನಡ ಸಾಹಿತ್ಯ ಪರಂಪರೆಗೆ ಮುಂಬಯಿ ಕವಿ, ಸಾಹಿತಿಗಳ ಸಮೃದ್ಧ ಕೊಡಗೆಯಿದೆ. ಹೊರನಾಡಿನವರಿಗೆ ಪ್ರಶಸ್ತಿ, ಬಹುಮಾನ ಇತ್ಯಾದಿಗಳ ಸಂದರ್ಭದಲ್ಲಿ ಗುರುತಿಸುವಿಕೆಯ ಅಲಕ್ಷ ಖಂಡಿತಾ ಇದೆ. ಆದರೆ ವೈಯಕ್ತವಾಗಿ ನಾನು ಯಾವತ್ತೂ ಹೊರ ನಾಡಿನವನೆಂದು ಭಾವಿಸಿಕೊಂಡಿಲ್ಲ. ಭೌಗೋಳಿಕವಾಗಿ ದೂರ ನೆಲೆ ನಿಂತಿದ್ದರೂ ನನ್ನ ಭಾಷೆ, ಬರವಣಿಗೆ, ಸಂವೇದನೆ ಅದು ಕನ್ನಡ ನಾಡಿನದ್ದೇ ಆಗಿರುವುದು ಎಂದರು.

**ಊರಿನಿಂದ ಮುಂಬೈಗೆ ಹೋಗಿ ಅಲ್ಲಿ ಬದುಕು ಕಟ್ಟಿಕೊಂಡ ಜೊತೆಗೆ ನಿಮ್ಮ ಕಾವ್ಯಯಾನದ ಬಗ್ಗೆ ಪ್ರಶ್ನೆಗೆ,** ಕರಾವಳಿ ಕುಂದಾಪುರದಲ್ಲಿರುವ ತ್ರಾಸಿ ಊರಿನಿಂದ ನಾನು ಏಳನೇ ತರಗತಿ ಮುಗಿಸಿ ಬಾಂಬೆಗೆ ಹೋಗಬೇಕಾಯಿತು. ಅಲ್ಲಿ ಹೈಸ್ಕೂಲು ಮತ್ತು ಜೂ. ಕಾಲೇಜು ಶಿಕ್ಷಣವನ್ನು ರಾತ್ರಿ ಶಾಲೆಯ ಮೂಲಕ ಮುಂದುವರಿಸಿದೆ. ಹಗಲು ಕೆಲಸ ಮಾಡುತ್ತಲೇ ಮೂರು ಮೂರು ಪದವಿಗಳನ್ನು ಮುಗಿಸಿದೆ. ನನಗೆ ಓದಿನ ಗೀಳು ವಿಪರೀತ ಇತ್ತು, ಅದು ಈಗಲೂ ಇದೆ. ಕಥೆ, ಪ್ರವಾಸ ಕಥನ, ಅಂಕಣ ಬರಹ, ನಾಟಕ ಅಂತ ಬರೆಯುತ್ತಲೇ ಬಂದಿರುವೆ. ಆದರೂ ಕಾವ್ಯ ಮಾಧ್ಯಮ ನನಗೆ ತೀರಾ ಆಪ್ತವಾದುದು.

**ನಿಮ್ಮ ಕಾವ್ಯ ಕೃಷಿಗೆ ಪ್ರೇರಣೆಯಾದವರು ಯಾರು** ?

"ಪ್ರತ್ಯಕ್ಷವಾಗಿ ಪ್ರೇರಣೆ ಅಂತ ಯಾರಿಲ್ಲ. ಆದರೆ ಮುಂಬೈನ ಹಿರಿಯ ತಲೆಮಾರಿನ ಕವಿಗಳಾದ ಗಂಗಾಧರ ಚಿತ್ತಾಲ, ವಿ. ಜಿ. ಭಟ್ಟರು, ಅರವಿಂದ ನಾಡಕರ್ಣಿ, ಬಿ. ಎ. ಸನದಿ, ಈಗ ನಮ್ಮೊಂದಿಗಿರುವ ಹಿರಿಯ ಕವಿ ಸುನೀತಾ ಶೆಟ್ಟಿ ಮುಂತಾದವರ ಬಗ್ಗೆ ನನಗೆ ಬಹಳ ಹೆಮ್ಮೆ ಗೌರವ ಇದೆ. ಒಳನಾಡಿನಿಂದ ಹಿರಿಯ ಪ್ರಸಿದ್ಧ ಕವಿಗಳು, ಸಾಹಿತಿಗಳು ಮುಂಬೈಗೆ ಬಂದಾಗ ಕವಿಗೋಷ್ಠಿಗಳಲ್ಲಿ ಅವರ ಜೊತೆ ವೇದಿಕೆ ಹಂಚಿಕೊಳ್ಳುವ ಅವಕಾಶ ಒದಗಿ ಬಂದಿತ್ತು. ಅವರ ಪ್ರೋತ್ಸಾಹ ಆತ್ಮವಿಶ್ವಾಸವನ್ನು ಹೆಚ್ಚಿಸಿದ್ದವು. ಇವತ್ತು ನಾನು ಕವಿ ಅಂತ ಗುರುತಿಸಲ್ಪಡುವುದಕ್ಕಿಂತ, ಒಳ್ಳೆಯ ಮನುಷ್ಯನಾಗಲು ಕಾವ್ಯ ದಾರಿ ತೋರುವುದು ಎಂಬ ನಂಬಿಕೆ ನನ್ನದು..." ಎಂದು ಸಂವಾದದಲ್ಲಿ ಹೇಳಿದರು.

# ಕಂದನ ಕೂಗು – ವಿಮರ್ಶೆ

| | | |
|---|---|---|
| ಕೃತಿ | : | ಕಂದನ ಕೂಗು |
| ಕೃತಿಕಾರರು | : | ಶ್ರೀ ಯೋಗ ವಿಶಾರದ (ಅಲಹಾಬಾದ್) |
| ಪ್ರಕಾಶಕರು | : | ಧಾರವಾಡದ ಮನೋಹರಗ್ರಂಥ ಭಂಡಾರದವರು) |

ಕನ್ನಡ ಸಾಹಿತ್ಯದಲ್ಲಿ 'ಶಿಶುಸಾಹಿತ್ಯ' ವೆಂಬುದು ಒಂದು ಹೊಸ ಪ್ರಭೇಧ. ಈ ವಿಧವಾದ ಸಾಹಿತ್ಯವು ಆಂಗ್ಲಭಾಷೆಯಲ್ಲಿ ವಿಶೇಷವಾಗಿ ಬೆಳೆದು ಬಂದಿದೆ. ಇತ್ತೀಚೆಗೆ ಕನ್ನಡ ಸಾಹಿತ್ಯದಲ್ಲೂ 'ಶಿಶುಸಾಹಿತ್ಯ'ವು ಅತಿಶಯವಾಗಿ ವೃದ್ಧಿಯಾಗುತ್ತಿರುವುದು ಹೆಮ್ಮೆಯ ಮಾತಾಗಿದೆ. ಈಗಾಗಲೇ ಹಲವು ಕವಿಗಳು ಈ ವಿಧವಾದ ಸಾಹಿತ್ಯಸೇವೆಯನ್ನು ಸಲ್ಲಿಸಿದ್ದಾರೆ. ಇವರಲ್ಲಿ ಜಿ.ಪಿ. ರಾಜರತ್ನಂ, ಎಂ. ವಿ. ಸೀತಾರಾಮಯ್ಯ, ಪಂಜೆ ಮಂಗೇಶರಾಯರು ಮುಂಚೂಣಿಯಲ್ಲಿದ್ದಾರೆ. ಅವರು ಹಾಕಿದ ಹೆದ್ದಾರಿಯೇ ಇದು ಎಂದರೆ ಅತಿಶಯೋಕ್ತಿಯಾಗಲಾರದು.

ಸುಲಭವಾದ ಕಥಾವಸ್ತುವನ್ನು ಮಕ್ಕಳ ಬಳಕೆಯಲ್ಲಿರುವ ಪದಗಳ ಮೂಲಕ ಪದ್ಯರೂಪದಲ್ಲಿ ಬರೆಯುವುದು ಸುಲಭದ ಕೆಲಸವಲ್ಲ. ಇದನ್ನು ಉತ್ತಮ ರೀತಿಯಲ್ಲಿ ಸಂಧಿಸುವ ಪ್ರಯತ್ನಗಳೆಲ್ಲವೂ ಆದರಣೀಯವಾದದು. ಪದ್ಯಗಳನ್ನು ಓದುವುದು, ಹಾಡುವುದು, ಹಾಡುತ ಕುಣಿಯುವುದು □ ಇವುಗಳಲ್ಲಿ ಮಕ್ಕಳಿಗೆ ಸಹಜವಾಗಿ ಆಸಕ್ತಿಯನ್ನು ಬೆಳೆಸುತ್ತದೆ. ಆದುದರಿಂದ ಇಂತಹ ಸಾಹಿತ್ಯದ ಮೂಲಕ ಮಕ್ಕಳಿಗೆ ಚಿಕ್ಕ ವಯಸ್ಸಿನಲ್ಲೇ ಅನೇಕ ವಿಷಯಗಳನ್ನು ಸುಲಭವಾಗಿ ಬೋಧಿಸಬಹುದು. ಅಲ್ಲದೇ ಅವರಿಗೆ ಹಲವು ಶಬ್ದಗಳ ಪರಿಚಯವಾಗಿ ಅವರ ಶಬ್ದ ಭಂಡಾರವೂ ಹೆಚ್ಚುತ್ತದೆ. ಸಣ್ಣ ಮಕ್ಕಳ ಭಾವಿ ಜೀವನದಲ್ಲಿ ಸಾಹಿತ್ಯಾಭಿರುಚಿಗೆ ಇದರಿಂದ ಉತ್ತಮ ತಳಹದಿಯನ್ನು ಹಾಕಿಕೊಟ್ಟಂತಾಗುತ್ತದೆ.

'ಕಂದನ ಕೂಗು' ಕಡೆಗಣಿಸಬಾರದು. ಅದನ್ನು ಅಲ್ಲಗೆಳೆವರು ವಂದ್ಯರು; ಆಲಿಸುವವರು ವಂದ್ಯರು. ಇದನ್ನು ನಿರೂಪಿಸುವ ಲಕ್ಷ್ಮೀಶ ಕವಿಯ (ಜೈಮಿನಿಭಾರತ ಸಂಧಿ 18, ಪದ್ಯ 20) ಪದ್ಯವೊಂದನ್ನು ಇಲ್ಲಿ ಬರೆಯದಿರಲಾರೆ.

ಆಟಪಾಟ, ರೀತಿ–ನೀತಿ, ಸರಸ–ಸಲ್ಲಾಪ, ಬದುಕುವ ರೀತಿ ಮುಂತಾದ ಅಮೂಲ್ಯ ವಿಷಯಗಳನ್ನು ವಿಸ್ತಾರವಾಗಿ ವಿವರಿಸುವ ಶ್ರೀ ಯೋಗರವ ಈ ಪುಸ್ತಕಕ್ಕೆ 'ಕಂದನಕೂಗು' ಎಂಬ ನಾಮಕರಣವು ಉಚಿತವಾಗಿಯೇ ಇದೆ. ಈ ಪುಟ್ಟ ಪುಸ್ತಕದಲ್ಲಿ ಕಂದನ ಸುಶಿಕ್ಷಣಕ್ಕೆ ಅತ್ಯಂತ ಸಹಕಾರಿಯಾದ ಇಪ್ಪತ್ತು ಕವಿತೆಗಳಿವೆ. ಕಾಗೆ ಕೃಷ್ಣ ಸರ್ಪ, ದೀವಳಿಗೆ, ಓಡಿ ಬನ್ನಿ, ನರಿಯಯುಕ್ತಿ, ಚುಟುಕ ಮೆಣಸಿನಕಾಯಿ, ನಮ್ಮ ನಾಡು, ತುಣುಕು ಗಾಳಿಪಟ, ಮಿಠಾಯಿ, ನನ್ನ ಕೆಲಸ, ಮೂಢ, ಬುಗುರಿ, ಬರಿಯ ಬಯಕೆ, ಆಮೆ ಮತ್ತು ಮಗು, ಬಿಡುವು ಮಾತಿನ ಮಂಗ, ನಮ್ಮ ಕುದ್ರೆ, ಬೀಸಣಿಗೆ, ಕಾಯಿ, ಎಂಬಿವೇ ಕಂದನ ಕೂಗಿನಲ್ಲಿರುವ ಕವಿತೆಗಳು.

**ವಾರ್ಧಕಷಟ್ಪದಿ: –**

ಕಂದನಾಡುವ ಬಾಲಲೀಲೆಯಂ ನೋಡಿ ತೊದ।
ಲೊಂದಿದಿನಿವಾತನುರೆ ಕೇಳ್ದು ಮುದ್ದಿನ ಮುದ್ದೆ।
ಯಂದದಂಗವನೆತ್ತಿಕೊಂಡು ನಳಿತೋಳ್ಗಳಿಂದಪ್ಪಿ
ಕೆಂಗುರುಳ್ಗಳೊಲೆವ॥
ಮುಂದೆಲೆಯ ಕಂಪನಾಘ್ರಾಣಿಸಿ ಕೆಣಕಿದ ಜೊಲ್ಲ।
ಚೆಂದುಟಿಯ ಬಾಯ್ದೆರೆಯನ್ನೆದೆ ಚುಂಬಿಸಿ ಸೊಗಸು।
ಗುಂದದಾಯೆಂದು ಪಂಚೇಂದ್ರಿಯ ಪ್ರೀತಿಯಂ
ಪಡೆವರಿನ್ನಾವಕೃತ॥

ಶ್ರೀ ಯೋಗರ ಕವಿತಾ ಕನ್ಯೆ ಹುಟ್ಟು ಚೆಲುವೆ. ಅವಳಿಗೆ ಭಾವ–ರಸಗಳೆಂಬ ವಸ್ತ್ರಾಭರಣಗಳನ್ನು ಧರಿಸಿದ್ದಾರೆ. ಅಂದಮೇಲೆ ಅವಳ ಸೌಂದರ್ಯಕ್ಕೆ ಸಮನಿಲ್ಲ. ಆದರೆ ಅವಳನ್ನು ಅಲಂಕರಿಸುವ ಅವಸರದಲ್ಲಿ ಕೆಲವು ಆಭರಣಗಳು ಅಸ್ತವ್ಯಸ್ತವಾಗಿರುವಂತೆ ಕಂಡು ಬರುತ್ತದೆ. ಅದನ್ನು ತಿದ್ದಿಪಡಿಸಿದರೆ ಅವಳು ಇನ್ನೂ ಮುದ್ದಾಗಿ ಮೆರೆಯುವಳೆಂದು ನಂಬಬಹುದು.

ಶ್ರೀ ಯೋಗರದು ನವೀನ ಕವಿತೆಗಳು. ಇವಕ್ಕೆ ಯತಿ–ಗಣ–ಪ್ರಾಸಾದಿ ಛಂದೋನಿಯಮಗಳೇನೂ ಅಷ್ಟಾಗಿ ಬೇಕಿಲ್ಲ. ಅರ್ಥಭಾಸವಾದರೆ ಅಷ್ಟೇ ಸಾಕು. ಅಂದ ಮಾತ್ರಕ್ಕೆ ಕವಿತಾ ಪದ್ಧತಿಯಲ್ಲಿ ನಮ್ಮ ಕೈ ಅಷ್ಟು ಸಡಿಲಾಗಬಾರದು ಮತ್ತು ಭಾಷಾ ಮರ್ಯಾದೆಗೆ ಭಂಗ ತರಬಾರದು.

ಸರಳ ಕವಿತೆಯಾದರೂ ಶ್ರಮವಿಲ್ಲದೆ ಸಿಗದು. ಸುಖಪ್ರಸವದಲ್ಲಿಯೂ ಬೇನೆ ಉಂಟೇ ಉಂಟು. "ಬೇನೆ ಹೆಚ್ಚಿದಷ್ಟೂ ಬೆಸಲು ಚೆನ್ನ", "ಕಷ್ಟಪಟ್ಟಷ್ಟೂ ಕವಿತೆ ಚೆನ್ನ" ಎಂಬ ತತ್ವವನ್ನು ಯಾರೂ ಮರೆಯಬಾರದು. ನವೀನ ಕವಿತೆಗಳಿಗೆ ನಡೆ–ನುಡಿ–ಭಾವಗಳೇ ಜೀವ. ಆದುದರಿಂದ ಈ ಮೂರಕ್ಕೂ ನಾವು ತುಂಬಾ ಗಮನ ಕೊಡಬೇಕು. ಪ್ರಾಸಾಲಂಕಾರಗಳು ಪ್ರಾಣಸಂಕಟಕರಗಳು; ಅವುಗಳ ಗೊಡವೆಗೆ ನಾವು ಹೋಗಲೇಬಾರದು. ಹೋದರೆ ಸಾಧಿಸಬೇಕು. ಮ್ಲೇಚ್ಛ ಶಬ್ದಗಳನ್ನು ಮೂಲೆಗೊತ್ತಬೇಕು. ಸರ್ವನಾಮ ಶಬ್ದಗಳ ವೃಥಾ ಪ್ರಯೋಗ ಸಾಧುವಲ್ಲ. ಅನುಕರಣಾವ್ಯಯಗಳೊಡನೆ ಸಂಧಿ ಮಾಡಬಾರದು; ದೂರಾನ್ವಯವನ್ನು ದೂರ ಮಾಡಬೇಕು. ಅಪಶಬ್ದ ಪ್ರಯೋಗಕೂಡದು. ಅರ್ಥಕ್ಕೆ ಅತಿವ್ಯಾಪ್ತಿಯಿರಕೂಡದು. ನಡೆ (Meter) ಸರಿ ಹೋಗಲೆಂದು ಹ್ರಸ್ವ–ದೀರ್ಘಾಕ್ಷರಗಳನ್ನು ಏರುಪೇರು ಮಾಡಬಾರದು. ಈ ದೃಷ್ಟಿಯಿಂದ ಕೆಲವು ತಿದ್ದುಪಡಿಗಳನ್ನು ಸೂಚಿಸಿದೆ. ಸೂಕ್ತ ತೋರಿದರೆ ಮುಂದಿನ ಮುದ್ರಣದಲ್ಲಿ ಈ ತಿದ್ದುಪಡಿಗಳನ್ನು ಮಾಡಬಹುದು. ವಿಮರ್ಶೆಗಾಗಿ ಕಳುಹಿಸಿದ ಪುಸ್ತಕದ ಮೇಲೆ ವಿಪರೀತ ವ್ಯಾಖ್ಯಾನವೇಕೇ? ಎಂದು ತಿಳಿಯಕೂಡದು. ಇವು ಭಿನ್ನವಾದ ನುಡಿಗಳೇ ಹೊರತು ಬಿನ್ನಾಣದ ನುಡಿಗಳಲ್ಲವೆಂಬುದನ್ನು ಒತ್ತಿ ಹೇಳುವೆನು.

– **ಕೆ. ವಿ. ದೊರೆಸ್ವಾಮಿ ಅಯ್ಯರ್** (1950ದಲ್ಲಿ ಬರೆದ ಲೇಖನ)

(ಕೆ. ವಿ. ದೊರೆಸ್ವಾಮಿ ಅವರು ನಮ್ಮ ಅಸೋಸಿಯೇಷನ್‌ನ ಹಿರಿಯ ಸದಸ್ಯರಾದ ಶ್ರೀಮತಿ ವನಜಾ ರಾಜನ್ ಅವರ ತಂದೆ)

# ಕನ್ನಡ ದೇವರು ಖಂಡೋಬಾ ಮಹಾರಾಷ್ಟ್ರದಲ್ಲಿ ಬಹುಜನ ಪ್ರಿಯ!



✍ ಡಾ. ಜಿ. ಎಸ್. ಉಪಾಧ್ಯ

ಖಂಡೋಬಾ ಮಹಾರಾಷ್ಟ್ರದ ಪ್ರಮುಖ ಶಕ್ತಿಶಾಲಿ ದೇವರು. ಉತ್ತರ ಕರ್ನಾಟಕದ ಅರಾಧ್ಯ ದೈವ ಮೈಲಾರನನ್ನು ಮರಾಠಿಗರು 'ಖಂಡೋಬಾ' ಎಂದು ಕರೆದು ಪೂಜಿಸಿ ತಮ್ಮವನನ್ನಾಗಿ ಮಾಡಿಕೊಂಡ ಕಥೆ ಹಲವು ದೃಷ್ಟಿಯಿಂದ ಬಲು ರೋಚಕವೂ, ಉದ್ಬೋಧಕವೂ ಆಗಿದೆ. ಈ ಉಭಯ ರಾಜ್ಯಗಳ ಸಂಘರ್ಷವನ್ನು ಸ್ನೇಹಮಯವಾಗಿ ಮಾಡಿದ ದೇವರು ನಮ್ಮ ಮೈಲಾರ!! ಆ ಕುರಿತಾದ ಕಿರು ಲೇಖನ ಇಲ್ಲಿದೆ.

ಬಹು ದೇವರ ಉಪಾಸನೆ ನಮ್ಮಲ್ಲಿ ಲಾಗಾಯ್ತಿನಿಂದಲೂ ನಡೆದು ಬಂದಿದೆ. ಬಹುತ್ವ ನಮ್ಮ ದೇಶದ ಜೀವಾಳ. ಆಗಮ ಪರಂಪರೆಯ ದೇವತೆಗಳ ಜತೆ ಜತೆಗೆ ಜಾನಪದ ದೇವರು ಸಹ ಅಷ್ಟೇ ಗಡದ್ದಾಗಿ ಆರಾಧನೆಗೊಳ್ಳುತ್ತಾ ಬಂದಿರುವುದು ವಿಶೇಷ.

ಕರ್ನಾಟಕ – ಮಹಾರಾಷ್ಟ್ರ ಇವುಗಳ ನಡುವಿನ ಬಾಂಧವ್ಯಕ್ಕೆ ಸುಮಾರು ಎರಡು ಸಾವಿರ ವರ್ಷಗಳ ಗಟ್ಟಿಯಾದ ಹಿನ್ನೆಲೆಯಿದೆ. ಈ ಉಭಯ ರಾಜ್ಯಗಳ ನಡುವಿನ ಸಂಬಂಧವನ್ನು ನಂಟನ್ನು ಬೆಸೆಯುವಲ್ಲಿ ದೇವಾದಿ ದೇವತೆಗಳ ಪಾತ್ರ ಘನಿಷ್ಠವಾದುದು. ಇವತ್ತಿನ ಮಹಾರಾಷ್ಟ್ರದ ಜನಪ್ರಿಯ ದೇವರು ವಿಠಲ, ಮಹಾಲಕ್ಷ್ಮೀ, ಖಂಡೋಬಾ, ತುಳಜಾ ಭವಾನಿ ಇವರೆಲ್ಲ ಪ್ರಾಚೀನ ಕರ್ನಾಟಕದ ಸಾಂಸ್ಕೃತಿಕ ಇತಿಹಾಸದ ಭಾಗವೇ ಆಗಿರುವುದು ಚಾರಿತ್ರಿಕ ಸತ್ಯ.

ಮೈಲಾರ, ಮಲ್ಲಯ್ಯ, ಖಂಡೋಬಾ ಎಂಬೆಲ್ಲ ಹೆಸರುಗಳಿಂದ ಗುರುತಿಸಲ್ಪಡುವ ಖಂಡೋಬಾ ದೇವರು ಮೂಲತಃ ಕರ್ನಾಟಕದ ಗ್ರಾಮದೇವತೆ. ಈ ಜಾನಪದ ದೇವರ ಪ್ರಭಾವ ವಲಯವು ಬಹಳ ವಿಸ್ತಾರವಾಗಿದೆ. ಕರ್ನಾಟಕದ ರಾಜಕೀಯ ವಲಯ, ಎಲ್ಲೆಗಳನ್ನು ಮೀರಿ ಮಹಾರಾಷ್ಟ್ರ, ಮಧ್ಯಪ್ರದೇಶ, ತಮಿಳುನಾಡು, ಗೋವಾ, ತೆಲಂಗಾಣ ಹಾಗೂ ಆಂಧ್ರಪ್ರದೇಶಗಳಲ್ಲಿಯೂ ಈತ ಜನಪ್ರಿಯ ದೇವತೆಯಾಗಿ ಪ್ರಸಿದ್ಧಿಯನ್ನು ಪಡೆದಿದ್ದಾನೆ. ಕರ್ನಾಟಕ ಮೂಲದ ಈ ಮೈಲಾರ ಅಥವಾ ಖಂಡೋಬಾ ಕುಲದೇವರೆಂದು ವ್ಯಾಪಕವಾಗಿ ಅನ್ಯ ರಾಜ್ಯಗಳಲ್ಲಿ ಪೂಜೆಗೊಳ್ಳುವ ಪರಿ ಬೆರಗು ಹುಟ್ಟಿಸುವ ಸಂಗತಿ. ಮಹಾರಾಷ್ಟ್ರದ ಅನೇಕ ಕುಟುಂಬಗಳ, ರಾಜಮನೆತನಗಳ ಕುಲದೇವರು ಮೈಲಾರಲಿಂಗ !!

ಮೈಲಾರ ಅಥವಾ ಖಂಡೋಬನ ಪ್ರಭಾವ ಕಾವೇರಿಯಿಂದ ಗೋದಾವರಿ ಪ್ರಾಂತವನ್ನು ಮೀರಿ ವ್ಯಾಪಿಸಿರುವುದು ಅಚ್ಚರಿಯ ಅಂಶ, ಕರ್ನಾಟಕದಲ್ಲಿ ಬೀದರ್‌ನ ಪೆಂಬೇರ, ಮೈಲಾರ, ಯಾದಗಿರಿ, ದೇವರ ಹಿಪ್ಪರಗಿ, ಗುಡೂರು, ಆನೆಗೊಂದಿ, ರಾಣೆಬೆನ್ನೂರು, ಹಿರೇಮೈಲಾರ, ದೇವರಗುಡ್ಡ,, ಬೀಳಗಿ ಹೀಗೆ ವಿವಿಧ ಕಡೆ ಮುನ್ನೂರೈವತ್ತಕ್ಕೂ ಹೆಚ್ಚು ದೊಡ್ಡ ಸಣ್ಣ ಮೈಲಾರ ದೇವಾಲಯಗಳಿವೆ. ಕರ್ನಾಟಕದಿಂದ ಒಂದು ಕಾಲದಲ್ಲಿ ಮಹಾರಾಷ್ಟ್ರಕ್ಕೆ ವಲಸೆ ಬಂದ ಈ ದೇವತೆಗೆ ಇವತ್ತು ಮಹಾರಾಷ್ಟ್ರದಲ್ಲಿ ಸುಮಾರು ನಾಲ್ಕುನೂರಕ್ಕೂ ಹೆಚ್ಚು ಆರಾಧನ ಕೇಂದ್ರಗಳಿರುವುದು ವಿಶೇಷ. ಇವತ್ತಿನ ಮಹಾರಾಷ್ಟ್ರದ ಜೆಜೂರಿ, ಪಾಲಿ, ನಳದುರ್ಗ, ಮಾಲೆಗಾಂವ್, ನೇವಾಸೆ, ಸತಾರಾ, ಧಾಮಣಟೇಕ ಮೊದಲಾದ ಕಡೆ, ಕೊಂಕಣ ಹಾಗೂ ವಿದರ್ಭ ಪ್ರಾಂತವೂ ಸೇರಿದಂತೆ ಖಂಡೋಬಾನ ಉಪಾಸನೆ ದೊಡ್ಡ ಮಟ್ಟದಲ್ಲಿ ನಡೆಯುತ್ತಾ ಬಂದಿದ್ದು ದಿನವಹಿ ಸಾವಿರಾರು ಭಕ್ತರನ್ನು ಬರಮಾಡಿಕೊಳ್ಳುತ್ತಿರುವುದು ಗಮನೀಯ ಸಂಗತಿ.

ಕಲ್ಯಾಣದ ಚಾಲುಕ್ಯರು, ರಾಷ್ಟ್ರಕೂಟರು, ಸೇವುಣರು, ರಟ್ಟರು,ಮರಾಠಾ ದೊರೆಗಳು, ಅವರ ಸಾಮಂತರು, ಪೇಳ್ವೆಗಳು, ಹೋಲ್ಕರ್ ಮನೆತನ ಮೊದಲಾದವರು ಮೈಲಾರಲಿಂಗನಿಗೆ ದತ್ತಿ ದಾನಗಳನ್ನು ಬಿಟ್ಟ ಅಂಶ ಇತಿಹಾಸದಲ್ಲಿ ದಾಖಲಾಗಿದೆ. ಕನ್ನಡ, ಮರಾಠಿ ಶಿಷ್ಟ ಹಾಗೂ ಜಾನಪದ ಸಾಹಿತ್ಯದಲ್ಲಿಯೂ ಮೈಲಾರನ ಕುರಿತು ಸಮೃದ್ಧವಾದ ಮಾಹಿತಿ ಲಭ್ಯವಿದೆ. ಮೈಲಾರ ಪೌರಾಣಿಕ ಹಿನ್ನೆಲೆಯಿರುವ ದೇವರಲ್ಲ. ಇವನು ಜನಮಾನಸದ ದೈವ. ಆತ ಕುಲ ಸಂಕೇತದ ಆದಿಮ ಸಂಸ್ಕೃತಿಯ ಪ್ರತೀಕ. ಮಾಳಚಿ ಅವನ ಪತ್ನಿ. ಖಂಡೋಬಾ ಭಂಡಾರಪ್ರಿಯ. ಮೈಲಾರ ಏಳು ಕೋಟಿ ಸೈನ್ಯವನ್ನು ಹೊಂದಿದ್ದನಂತೆ. ತಿರುಪತಿ ತಿಮ್ಮಪ್ಪನ ಸಾಲ ಸಹ ಏಳು ಕೋಟಿ. ಅದನ್ನು ಆತ ಮೈಲಾರನಿಗೆ ಕೊಟ್ಟಿದ್ದನಂತೆ. ಎಂತಲೇ ಈ ದೇವರಿಗೆ ಏಳು ಕೋಟಿ ಎಂಬ ಹೆಸರು ಬಂತು.ಈ ಏಳು ಸಂಖ್ಯೆ ಮತ್ತೆ ಮತ್ತೆ ಮಲ್ಲಾರಿ ಮಹಾತ್ಮ್ಯೆಯಲ್ಲಿ ಸಹ ಬಂದು ಹೋಗಿದೆ. ಕನ್ನಡ ಭಕ್ತರಂತೆ ಮರಾಠಿ ಭಕ್ತರಿಗೂ ಏಳ್ ಕೋಟ್ ಏಳ್ ಕೋಟ್ ಉಘ ಮಲ್ಲಾರ್ ಎಂಬ ಸಾಲು ಬಲು ಇಷ್ಟ. ಈ ಕಾರಣಿಕ ಮೈಲಾರನ ಭಕ್ತರನ್ನು ಗೊರವರು, ಗುರವ್, ವಾಘೇ ಎಂದೆಲ್ಲ ಮಹಾರಾಷ್ಟ್ರದಲ್ಲಿ ಕರೆಯಲಾಗುತ್ತದೆ. ಖಂಡೋಬಾ ಧನಗರ್, ಕುರುಬ, ಗೊಲ್ಲ, ಕೋಲಿ, ಗೌಳಿ, ಗೊರವ, ಲಿಂಗವಂತ ಮೊದಲಾದ ದೊಡ್ಡದೊಡ್ಡ ಜನ ಸಮುದಾಯಗಳ ಆರಾಧ್ಯ ದೈವ. ಜುಂಜಪ್ಪ, ವೀರಭದ್ರ, ಎಲ್ಲಮ್ಮ ಸಂಪ್ರದಾಯಗಳ ಜೊತೆಗೂ ಈ ದೇವರ ನಂಟು ಇದೆ. ಹೀಗೆ ಬಹು ಸಂಸ್ಕೃತಿಯ ಹಿನ್ನೆಲೆಯಿರುವ ಕರ್ನಾಟಕದ ಮೈಲಾರ ಮಹಾರಾಷ್ಟ್ರದಲ್ಲಿ ಖಂಡೋಬಾನಾದ ಕಥೆ ಬಹುರೋಚಕವಾಗಿದೆ.

ಖಂಡೋಬಾನ ಮೂಲಚೂಲಗಳ ಕುರಿತು ಆಸಕ್ತಿ ತಳೆದು ಮೊದಲು ಅಧ್ಯಯನ, ಸಂಶೋಧನೆಗೆ ತೊಡಗಿದ ಹಿರಿಮೆ ಮರಾಠಿ ವಿದ್ವಾಂಸರಿಗೆ ಸಲ್ಲುತ್ತದೆ. ಖಂಡೋಬಾ ಮೂಲತ: ಕರ್ನಾಟಕದ ಮೈಲಾರ. ಇವನು ಮಹಾರಾಷ್ಟ್ರ–ಕರ್ನಾಟಕದ ಗ್ರಾಮದೇವತೆಯಾಗಿಯೂ ಜನಪ್ರಿಯ.

ಮಹಾರಾಷ್ಟ್ರದಲ್ಲಿ 'ಖಂಡೋಬಾ', ಕರ್ನಾಟಕದಲ್ಲಿ 'ಮೈಲಾರ' ಹೆಸರಿನಿಂದ ಕರೆಯಿಸಿಕೊಳ್ಳುವ ಈ ದೇವರು ಎರಡೂ ರಾಜ್ಯಗಳ ಸಂಸ್ಕೃತಿ

ಸಾಮರಸ್ಯದ ಪ್ರತೀಕನಾಗಿದ್ದಾನೆ. 'ಮಲ್ಲಾರಿ ಮಾರ್ತಾಂಡ ಭೈರವ' ಎಂಬುದು ಸಂಸ್ಕೃತ ಹೆಸರು. ಕುರುಬ-ರಾಮೋಶಿ ಜನರಿಂದ ಬ್ರಾಹ್ಮಣರವರೆಗೆ ಎಲ್ಲ ಕುಲಜಾತಿಗಳ ಜನರು ಆರಾಧಿಸುವುದು ಈ ದೇವರ ಜನಪ್ರಿಯತೆಗೆ ಕುಲದೇವತೆ, ಖಂಡೋಬಾ ಅಥವಾ ಮೈಲಾರನು ಶಿವನ ಮಾರ್ತಾಂಡ ಭೈರವನ ಅವತಾರ ನಿರ್ವಶನವೆನಿಸಿದೆ. ವಿಶ್ವಲ ಮಹಾರಾಷ್ಟ್ರದ ಉಪಾಸ್ಯ ದೇವತೆಯಾದರೆ ಖಂಡೋಬಾ ಎಂಬ ನಂಬಿಕೆ ಮಹಾರಾಷ್ಟ್ರದಲ್ಲಿ ಇವತ್ತಿಗೂ ಚಾಲ್ತಿಯಲ್ಲಿದೆ ಎಂಬುದನ್ನು ಮಹಾರಾಷ್ಟ್ರದ ಖ್ಯಾತ ಸಂಶೋಧಕ ರಾ. ಚಿಂ. ಡೇರೆ ಅವರು ತಮ್ಮ ದಕ್ಷಿಣದ ದೇಸಿ ದೇವರು ಖಂಡೋಬಾ ಕೃತಿಯಲ್ಲಿ ಆಧಾರ ಸಮೇತ ತೋರಿಸಿಕೊಟ್ಟಿದ್ದಾರೆ. ಈ ಉಭಯ ರಾಜ್ಯಗಳ ಸಂಘರ್ಷವನ್ನು ಸ್ನೇಹವನ್ನಾಗಿಸಿದ ದೇವರು ನಮ್ಮ ಮೈಲಾರ!

ಮೈಲಾರ ಲಿಂಗದ ಸಂಪ್ರದಾಯದಲ್ಲಿ ಅನೇಕ ಕಥೆಗಳು, ಐತಿಹ್ಯಗಳು, ನಂಬಿಕೆ, ಆಚರಣೆಗಳು ಚಾಲ್ತಿಯಲ್ಲಿವೆ. ಹೆಚ್ಚಿನ ಕಡೆಗಳಲ್ಲಿ ಏಳು ಕೋಟಿ ಕಥೆ ಒಂದೇ ಮಾದರಿಯಲ್ಲಿ ಕಾಣಸಿಗುತ್ತದೆ. ಅದು ಮೈಲಾರ ದೇವರ ಮದುವೆಗೆ ಸಂಬಂಧ ಪಟ್ಟದ್ದು. ಮೈಲಾರನ ಹೆಂಡತಿ ಗಂಗವ್ವ ಅಥವಾ ಗಂಗಿ ಮಾಳವ್ವ, ಮಾಳಸಾ ಇವಳು ತಿರುಪತಿ ತಿಮ್ಮಪ್ಪನ ಮಗಳು. ನಮ್ಮ ಮಾಳವ್ವ ಮಹಾರಾಷ್ಟ್ರದಲ್ಲಿ ಮಾಳಸಾದೇವಿ!! ಮೈಲಾರ ಲಿಂಗ ಖಂಡೋಬಾ ಒಂದು ಸಾಂಸ್ಕೃತಿಕ ಅಧ್ಯಯನ ಎಂಬ ಶೋಧ ಕೃತಿ ರಚನೆ ಮಾಡಿದ ಡಾ. ನೇಗಿನಹಾಳ ಅವರು ಸಹ ಈ ಕಥೆ ಎಲ್ಲೆಡೆ ಸಣ್ಣ ಪುಟ್ಟ ವ್ಯತ್ಯಾಸದೊಂದಿಗೆ ಬಳಕೆಯಲ್ಲಿ ಇರುವುದನ್ನು ತೋರಿಸಿ ಕೊಟ್ಟಿದ್ದಾರೆ. ಆ ಕಥೆ ಹೀಗಿದೆ.

**ಗಂಗಿ ಮಾಳಮ್ಮನ ಲಗ್ನ :**

ಮೈಲಾರಲಿಂಗಪ್ಪನಿಗೆ ಲಗ್ನವಾಗಬೇಕೆಂಬ ಬಯಕೆ ಉಂಟಾಯಿತು. ತನ್ನ ಊರಾದ ಮೈಲಾರದಿಂದ ಹೊರಟು ಬಳ್ಳಾರಿ ದೇಶಕ್ಕೆ ಬಂದ. ಅಲ್ಲಿನ ತನ್ನ ಭಕ್ತರನ್ನು 'ಇಲ್ಲಿ ಯಾರಲ್ಲಾದರೂ ಹೆಣ್ಣುಂಟೆ?' ಎಂದು ಕೇಳಿದ. ಅವರು 'ತಿರುಪತಿ ತಿಮ್ಮಪ್ಪನಲ್ಲಿ ಹೆಣ್ಣು ಇವೆ. ಹೋಗಿ ಕೇಳು' ಎಂದು ಹೇಳಿದರು. ಅವರ ಮಾತಿನಂತೆ ಈ ಗೊರವಯ್ಯ ತಿರುಪತಿಗೆ ಹೋದ. ತಿರುಪತಿಯಲ್ಲಿ ತಿಮ್ಮಪ್ಪ ತನ್ನ ಏಳು ಅಂತಸ್ತಿನ ಅರಮನೆಯ ಮೇಲ್ಮಾಳಿಗೆಯಲ್ಲಿ ಇದ್ದ. ಇವನು ಬಾಗಿಲಲ್ಲಿ ನಿಂತು ಗಂಟೆ ಬಾರಿಸಿದ, ಡಮರು ಹೊಡೆದ. ಗೊರವಯ್ಯ ಬಾಗಿಲಿಗೆ ಬಂದು ನಿಂತುದು ತಿಮ್ಮಪ್ಪನ ಹೆಣ್ಣು ಮಕ್ಕಳಿಗೆ ತಿಳಿಯಿತು. ಯಾವನೋ ಗೊರವ ಭಿಕ್ಷೆಗೆ ಬಂದಿದ್ದಾನೆ. ಅವನಿಗೆ ಅದನ್ನು ನೀಡಿ ಕಳಿಸಿರಿ ಎಂದು ಅವರು ತಮ್ಮ ತಮ್ಮಲ್ಲಿ ಹೇಳಿಕೊಂಡರು. ಹೊರಗೆ ಬಂದು ನೀಡಲು ಯಾರೂ ತಯಾರಾಗಲಿಲ್ಲ. ಕೊನೆಗೆ 'ಹಿರಿಯ ಮಗಳು ಗಂಗಮ್ಮ' ಗೊರವನಿಗೆ ಭಿಕ್ಷೆ ನೀಡಲು ಮುಂದಾದಳು. ಕೈಯಲ್ಲಿ ಮೊರ, ಅದರ ತುಂಬ ಮುತ್ತು ರತ್ನ ತುಂಬಿ ತಕ್ಕೊಂಡು ಹೊರಗೆ ಬಂದಳು.

ಆಗ ಅವಳನ್ನು ಕಂಡು ಬೆರಗಾದ ಮೈಲಾರ 'ಏನು ಹೆಣ್ಣು, ಎಂಥಾ ಚೆಲುವಿದೆ ? ಇವಳನ್ನು, ಬಿಡಬಾರದು' ಎಂದು ಮನದಲ್ಲಿ ನಿರ್ಧರಿಸಿದ. ಅವಳು ಹೊರಕ್ಕೆ ಬಂದು ಇವನ ಜೋಳಿಗೆಗೆ ಭಿಕ್ಷೆ ನೀಡುತ್ತಿದ್ದಂತೆ ಅವಳ ಕೈ ಹಿಡಿದು ಬಿಟ್ಟ. ಗೊರವಯ್ಯನ ಈ ಆಟ ನೋಡಿ ಗಂಗಮ್ಮ ಚೀರಿಕೊಂಡಳು. ಮಗಳು ಚೀರಿದ್ದು ತಿಮ್ಮಪ್ಪನಿಗೆ ಕೇಳಿತು. ಏಳನೆಯ ಅಂತಸ್ತಿನಿಂದ ಆತ ದೊಡ್ಡ ಬಡಿಗೆ ಊರುತ್ತ ಕೆಳಗಿಳಿದು ಬಂದ. ನೋಡುತ್ತಾನೆ, ಮೈಲಾರದ ಗೊರವಯ್ಯ!!,

ಇದೇನೆಂದು ವಿಚಾರಿಸಿದಾಗ ಇವಳನ್ನು ಕೊಟ್ಟು ನನಗೆ ಲಗ್ನ ಮಾಡು' ಎಂದ ಆತ. ತಿಮ್ಮಪ್ಪ ವಿಚಾರದಲ್ಲಿ ಬಿದ್ದ. ಇವನೋ ಹರಕು ಕೋರಿಯ ಮುರುಕು ಬೆತ್ತದ ಒಡಕು ದೋಣಿಯ ಗೊರವ, ಇಂಥವನಿಗೆ ತಾನು ಮಗಳನ್ನು ಕೊಡುವುದೇ? ಆದರೆ ಹಾಗೆ ಬಾಯಿಬಿಟ್ಟು ಹೇಳಲಾರ. ಇಲ್ಲೆಂದು ಹೇಳಿದರೆ ಗೊರವಯ್ಯ ಸಾಪಳಿಸಿ ಹೋಗುತ್ತಾನೆ. ಏನು ಮಾಡುವುದು? ತಿಮ್ಮಪ್ಪನಿಗೆ ಒಂದು ವಿಚಾರ ಹೊಳೆಯಿತು. ಇವನು ಕೊಡಲಾರದಷ್ಟು ತೆರವು' ಕೇಳಿದರಾಯಿತು, ತಾನೇ ತಿರುಗಿ ಹೋಗುತ್ತಾನೆ ಎಂದು ಅಂದುಕೊಂಡು 'ಏಳುಕೋಟಿ ಹೊನ್ನು ತೆರವು ಕೊಡುವುದಾದರೆ ನಿನಗೆ ನನ್ನ ಮಗಳನ್ನು ಕೊಡುತ್ತೇನೆ' ಎಂದು ಹೇಳಿದ. ಅದಕ್ಕೆ ಗೊರವಯ್ಯ ಒಪ್ಪಿ, ನನ್ನೂರು ಇಲ್ಲಿಂದ ಮುನ್ನೂರು ಹರದಾರಿ, ಅಲ್ಲಿಗೆ ಹೋಗಿ ಬರುವುದರಲ್ಲಿ ಆಷಾಢಮಾಸ ಬರುತ್ತದೆ. ಆಷಾಢದಲ್ಲಿ ನನ್ನ ಲಗ್ನವಿಲ್ಲ. ಲಗ್ನವಾಗಿ ನನ್ನೂರಿಗೆ ಹೋದ ಮೇಲೆ ನಿನ್ನ ತೆರವಿನ ಹಣ ಮುಟ್ಟಿಸುತ್ತೇನೆ' ಎಂದು ಹೇಳಿದ. ತಿಮ್ಮಪ್ಪ ನಿರ್ವಾಹವಿಲ್ಲದೆ ಒಪ್ಪಿದ.

ಇನ್ನು ಲಗ್ನ ಮಾಡಬೇಕಾದರೆ ಈತನಿಗೆ ಯಾರೂ ಇಲ್ಲ. ಲಗ್ನದ ಕಾರ್ಯ ನಿಭಾಯಿಸುವುದು ಹೇಗೆ? ಎಂದು ತಿಮ್ಮಪ್ಪ ಸಮಸ್ಯೆ ಎತ್ತಿದ. ಗೊರವಯ್ಯ 'ಈಗ ನೀನೇ ಕೈಯಿಂದ ಹಣ ಹಾಕಿ ಲಗ್ನ ಮಾಡು, ನಾನು ನನ್ನೂರಿಗೆ ಹೋದ ಮೇಲೆ ಆದರ ಅಸಲು ಬಡ್ಡಿ ಎಲ್ಲ ತೀರಿಸುತ್ತೇನೆ' ಎಂದ. ಬಡ್ಡಿಯ ಆಸೆಗಾಗಿ ತಿಮ್ಮಪ್ಪ ಒಪ್ಪಿ ಲಗ್ನದ ಸಿದ್ದತೆಗೆ ತೊಡಗಿದ. 'ಲಗ್ನಕ್ಕೆ ನಿನ್ನ ಸಂಬಂಧಿಗಳು ಯಾರಾದರೂ ಬರುವವರು ಇದ್ದಾರೆಯೇ' ಎಂದು ತಿಮ್ಮಪ್ಪ ಕೇಳಿದ. ಗೊರವಪ್ಪ ಸಮೀಪದ ಗುಡ್ಡದ ತುದಿಯ ಮೇಲೆ ನಿಂತು ತನ್ನ ತಂಗಿಯರನ್ನು ನೆನೆದ. ಆಗ ಸವದತ್ತಿಯ ಎಲ್ಲಮ್ಮ, ಹೊನ್ನತ್ತಿಯ ಹೊನ್ನಮ್ಮ (ಚಂದ್ರ), ಗುತ್ತಿಯ ಗುತ್ತವ್ವರ ಕವಡೆಗಳು ಅಲುಗಾಡಿದವು. ತಮ್ಮ ಅಣ್ಣ ಮೈಲಾರ ಯಾಕೋ ನೆನಪು ಮಾಡಿಕೊಂಡಿದ್ದಾನೆ ಎಂದು ಅವರೆಲ್ಲ ಯೋಚನೆ ಮಾಡಿ ಕವಡೆ ಹಾಕಿ ನೋಡಿದರು. ಕೊನೆಗೆ ಅವರೆಲ್ಲ ಬಂದು ಕ್ರಮದಂತೆ ಲಗ್ನವಾಗಿ ತಿಮ್ಮಪ್ಪ ತನ್ನ ಮಗಳನ್ನು ಕಳುಹಿಸಿ ಕೊಡಲು ಸಿದ್ದನಾದ. ದಿಬ್ಬಣ ಮದುಮಕ್ಕಳು ಸಮೇತ ಮೈಲಾರಕ್ಕೆ ಬಂತು. ತಿಮ್ಮಪ್ಪ ಹಣದ ವಿಷಯ ಪ್ರಸ್ತಾಪ ಮಾಡಿ ಹಿಂದಿರುಗಿಸು ಎಂದಾಗ 'ಭಾರತ ಹುಣ್ಣಿಮೆಯ ಜಾತ್ರೆಯ ಕಾಣಿಕೆ ಹಣದಿಂದ ಸಾಲ ತೀರಿಸುವೆ' ಎಂದು ಸಮಾಧಾನ ಹೇಳುತ್ತಾನೆ.

ಭಾರತ ಹುಣ್ಣಿಮೆಯಲ್ಲೂ ಸಾಲ ತೀರಲಿಲ್ಲ. ತಿಮ್ಮಪ್ಪ ಸಿಟ್ಟಾದಾಗ 'ಗುಡಿಸಲು ಸುತ್ತ ಐನೂರು ಹುಣಸೆ ಮರ ಉಂಟು. ಗಿಡ ಹಣ್ಣು ಬಿಟ್ಟಾಗ ಮಾರಿ ಸಾಲ ಮುಟ್ಟಿಸಿಕೊಳ್ಳು'

ಆದರೆ ಹುಣಸೆ ಪೂರ್ತಿ ಹಣ್ಣಾಗದೆ ದೋರೆಯಾಗಿತ್ತು. ಹೀಗಾಗಿ ಅಲ್ಲಿಯ ತನಕೆ ಮಗಳ ಎನ್ನುತ್ತಾನೆ. ಹುಣಸೆ ಮರ ಹಣ್ಣಾಗುವ ಸಮಯಕ್ಕೆ ತಿಮ್ಮಪ್ಪ ಮತ್ತೆ ಮೈಲಾರಕ್ಕೆ ಬಂದು ಮನೆಗೆ ಹೋಗಿ ಬರುವುದು ವಾಸಿ ಎಂದು ಹೋಗುತ್ತಾನೆ. ಅಲ್ಲಿ ಪುಷ್ಕಳ ಊಟ ಮಾಡಿ ನಿದ್ದೆ ಹೋಗುತ್ತಾನೆ.

ಸ್ವಲ್ಪ ಹೊತ್ತಿನಲ್ಲಿ ಮೈಲಾರ ಬಂದು ತಿಮ್ಮಪ್ಪನನ್ನು ಎಬ್ಬಿಸಿದ. 'ಏಳು, ಎಷ್ಟು ಹೊತ್ತು ಮಲಗಿದ್ದಿ. ನನಿಗೊಂದು ಕನಸು ಬಿದ್ದಿತ್ತು. ನೀನು ಹುಣಸೆ ಮರವನ್ನೆಲ್ಲ ಬಡಿದು ಮಾರಿ ಹಣ ಕಟ್ಟಿಕೊಂಡು ನಿನ್ನ ಗಿರಿಗೆ ಹೋದಂತೆ ತೋರಿತು. ಮಾರಾಯ ಹೆಚ್ಚಿನ ನನ್ನ ಹಣ ನನಗೆ ಕೊಟ್ಟು ಹೋಗು'

ಎಂದ. ಅದನ್ನು ಕೇಳಿದಾಗ ತಿಮ್ಮಪ್ಪ ಹೌಹಾರಿ ಹೋದ. ಇಬ್ಬರೂ ಸೇರಿ ಹುಣಸೆ ಮರದ ಸಮೀಪ ಬಂದು ನೋಡುತ್ತಾರೆ, ಅಲ್ಲೇನಿದೆ ? ಎಲ್ಲ ಮರಗಳು ಬೋಳು. ತಿಮ್ಮಪ್ಪ ಎದೆ ಎದೆ ಬಡಿದುಕೊಂಡ. ಜನ ಸೇರಿದರು. ತಾನು ಮಗಳ ಮನೆಯಲ್ಲಿ ಉಂಡು ಮಲಗಿದ್ದೆ. ಗಿಡಗಳನ್ನು ತಾನು ಬಡಿಯಲೇ ಇಲ್ಲ. ಇವನೇ ಏನೋ ಮೋಸ ಮಾಡಿದ್ದಾನೆ' ಎಂದು ಗೋಳಾಡಿದ. 'ಈತ ಹಗಲು-ರಾತ್ರಿ' ಎನ್ನದೆ ಗಿಡ ಕಾಯುತ್ತ ಅಲ್ಲಿಯೇ ಇದ್ದಾನೆ. ಬೇರೆ ಯಾರು ಬಂದು ಬಡಿಯುತ್ತಾರೆ ? ಈತ ಎಲ್ಲ ಬಡಿದುಕೊಂಡು ಹೆಚ್ಚಿನ ನನ್ನ ಹಣ ಕೊಡದೆ ಮೋಸ ಮಾಡಿದ್ದಾನೆ.' ಎಂದು ಗೊರವಯ್ಯ ಪ್ರತಿಯಾಗಿ ಆಪಾದಿಸಿದ. ಬುದ್ಧಿವಂತರಿಗೆ ಏನು ಹೇಳಬೇಕೋ ತಿಳಿಯಲಿಲ್ಲ. ಇಬ್ಬರೂ ಸೇರಿ ಬಹಳ ಹೊತ್ತು ಜಗಳಾಡಿದರು. ಕೊನೆಯಲ್ಲಿ ತಿಮ್ಮಪ್ಪ 'ನನ್ನ ಏಳುಕೋಟಿ, ಹಣ ತಿಂದು ಹಾಕಿದೆ. ಇನ್ನು ಮುಂದೆ ನೀನು 'ಏಳು ಕೋಟಿ ಏಳುಕೋಟಿ' ಎಂದು ಹೇಳುತ್ತ ತಿರುಗುತ್ತ ಹೋಗು, ನಿನಗೆ ಬಡತನ ಎಂದೂ ತಪ್ಪದಿರಲಿ' ಎಂದು ಶಾಪಕೊಟ್ಟು ಹೋದನಂತೆ!! ಈತ 'ಪುಕ್ಕಟೆ ಹೆಣ್ಣು ತಂದು ಬಿಟ್ಟೆ. ತಿಮ್ಮಪ್ಪಗೆ ಬುದ್ಧಿ ಕಲಿಸಿದೆ' ಎಂದು ಮನದಲ್ಲಿ ನಕ್ಕನಂತೆ. ಇದು ತಿಮ್ಮಪ್ಪನ ಮೈಲಾರನ ದುಡ್ಡಿನ ವ್ಯವಹಾರ, ವೃತ್ತಾಂತ. ಇದೇ ಕಥೆಯ ಬೇರೆ ಬೇರೆ ಪಾಠಗಳು ಮಹಾರಾಷ್ಟ್ರದಲ್ಲೂ ಚಾಲ್ತಿಯಲ್ಲಿವೆ.






ಮೈಲಾರ ದೇವರ ಸಂಪ್ರದಾಯದಲ್ಲಿ ಹೆಗ್ಗಡೆ ಮುಖ್ಯನಾಗಿದ್ದು ಈತ ತಿಮ್ಮಪ್ಪ ಎಂಬ ನಂಬಿಕೆ ಸಹ ಜಾನಪದರದು.ಇಲ್ಲಿ ಖಡ್ಗಕ್ಕೆ ವಿಶೇಷ ಪ್ರಾಧಾನ್ಯವಿದ್ದು ಅಂಥ ಮಾರ್ತಾಂಡನನ್ನು ಖಂಡೇರಾಯ ಎಂದೂ ಕರೆಯಲಾಗುತ್ತದೆ. ಈ ಕಾರಣದಿಂದ ಮೈಲಾರ ದೇವರನ್ನು ಮಹಾರಾಷ್ಟ್ರದಲ್ಲಿ 'ಖಂಡೋಬಾ' ಎಂದು ಕರೆದು ಪೂಜಿಸುವ ಪರಂಪರೆ ರೂಢಿಗೆ ಬಂದಿದೆ. ರಾಕ್ಷಸರನ್ನು ಖಂಡನ ಮಾಡಿದ್ದರಿಂದ ಈತ ಖಂಡೇರಾಯ. ಖಂಡೆಯ ಎಂದರೆ ಕನ್ನಡದಲ್ಲಿಯೂ ಖಡ್ಗ ಎಂದೇ ಅರ್ಥ. ಈತ ಆಶ್ವಾರೋಹಿ. ಮೈಲಾರ ಅಥವಾ ಖಂಡೋಬಾ ದೇವರು ಭಂಡಾರ ಪ್ರಿಯ.

ಭಂಡಾರ ಎಂದರೆ ಅರಿಸಿನದ ಪುಡಿ. ಈ ದೇವರ ಉತ್ಸವ, ಜಾತ್ರೆಗಳಲ್ಲಿ ಭಕ್ತ ಗಡಣ ಹಳದಿಯ ಓಕುಳಿಯಲ್ಲಿ ಮಿಂದೇಳುತ್ತದೆ. ಇದು ಈ ಸಂಪ್ರದಾಯದ ಪ್ರಮುಖ ವಿಶೇಷಗಳಲ್ಲಿ ಒಂದು. ಅರಶಿನದ ಬಳಕೆ ತುಂಬ ವ್ಯಾಪಕವಾಗಿ ನಡೆಯುವುದು ಕಂಡು ಬರುತ್ತದೆ. ದೇವರನ್ನು ಭಕ್ತರು 'ಖಂಡುಗ ಭಂಡಾರದೊಡೆಯ' ಎಂದೂ ಭಂಡಾರಕ್ಕೆ ಇವನೇ 'ಅದಿಕರ್ತ' ನೆಂದೂ ಜನಪದ ಹಾಡುಗಳಲ್ಲಿ ವರ್ಣಿಸಿದ್ದಾರೆ. ಶಿವನು ಲಿಂಗರೂಪದಲ್ಲಿ ಭೂಲೋಕದಲ್ಲಿ ಅವತರಿಸಿದಾಗ ಅವನ ಜೊತೆಗೆ ಭಂಡಾರವೂ ಹುಟ್ಟಿತೆಂದೂ ಅದರಿಂದಲೇ ದೇವತೆಗಳು ಋಷಿಗಳು ಸೇರಿ ಅವನನ್ನು ಪೂಜಿಸಿದರೆಂದೂ ಕತೆಗಳು ಪ್ರಚಲಿತವಾಗಿವೆ. ಮೈಲಾರಲಿಂಗನ ಭಕ್ತರ ನಂಬಿಕೆಯಲ್ಲಿ ಭೂಲೋಕದಲ್ಲಿ ಮೊದಲು ಹುಟ್ಟಿದ್ದೇ ಭಂಡಾರ. ಆದ್ದರಿಂದ ದೇವರ ಪೂಜೆಗೂ ತಮ್ಮ ನಿತ್ಯ ನೈಮಿತ್ತಿಕ ಕಾರ್ಯಗಳಿಗೂ ಭಂಡಾರ ಉಪಯೋಗಿಸಬೇಕು ಎಂದು ಅವರು ಭಾವಿಸುತ್ತಾರೆ. ಅದನ್ನೇ ಎಲ್ಲ ದೇವಾಲಯಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಬಳಸುವ ಕ್ರಮವಿದೆ. ಶಿವಲಿಂಗವನ್ನು ಭಂಡಾರದಿಂದ ಪೂಜಿಸುವ ಕ್ರಮ ಮೈಲಾರಲಿಂಗ ಪರಂಪರೆಯಲ್ಲಿ ಇದೆ. ಮಾಳಸಾ ದೇವಿಯ ಆರಾಧನೆ ಪೂರ್ತಿ ಜಾನಪದ ಹಿನ್ನೆಲೆಯನ್ನು ಹೊಂದಿದೆ.

ಬೇಟೆ ಸಂಸ್ಕೃತಿ ಹಾಗೂ ಕೃಷಿ ಸಂಸ್ಕೃತಿಗಳ ಸಂಗಮ ಈ ದೇವರ ಆರಾಧನೆಯಲ್ಲಿ ಕಂಡು ಬರುತ್ತದೆ. "ಕಾಡಿನ ಸಂಸ್ಕೃತಿ ನಾಡಿನ ಸಂಸ್ಕೃತಿಯಾಗಿ ಪರಿವರ್ತಿಸುತ್ತಿರುವ ಹಂತದ ಆಚರಣೆಗಳು ಇಲ್ಲಿ ಸನ್ನಿಹಿತವಾಗಿವೆ ಎಂದರೆ ಬೇಟೆಗಾರ ಮತ್ತು ಹೈನುಗಾರ ಸಂಸ್ಕೃತಿಯ ಅಂಶಗಳು ಸ್ಪಷ್ಟವಾಗಿವೆ. ಕೃಷಿಕ ಸಂಸ್ಕೃತಿಯ ಅಂಶಗಳು ಇಲ್ಲಿ ತೀರ ಕಡಿಮೆ ಪ್ರಮಾಣದಲ್ಲಿವೆ. ವೀರಗೆಲಸ, ಬೇಟೆ, ಭಂಡಾರ ಇವು ಬೇಟೆಗಾರಿಕೆಯ ಪ್ರಧಾನ ಅಂಶಗಳು. ತುಪ್ಪ, ಕೋರಿ ಮುಂತಾದವು ಹೈನುಗಾರಿಕೆಯವು. ಇತರೆಲ್ಲ ಸಂಕೇತಗಳು ಮೊದಲ ವಿಭಾಗಕ್ಕೆ ಸಲ್ಲುತ್ತವೆ. ಪ್ರದೇಶ ವ್ಯಾಪ್ತಿ ಕಾಲವ್ಯಾಪ್ತಿ, ಸಂಕೇತ ವೈವಿಧ್ಯ ಮತ್ತು ಆಚರಣಾ ವೈವಿಧ್ಯಗಳನ್ನು ಗಮನಿಸಿದರೆ ಆಗಮಿಕ ಮತ್ತು ಪೌರಾಣಿಕ ಸಂಸ್ಕೃತಿಗಿಂತ ಹಿಂದಿನ ಕಾಲಕ್ಕೆ ಸೇರಿದ ಪದರಗಳು ಇಲ್ಲಿ ಹರಡಿರುವುದು ನಿಶ್ಚಯ, ಪ್ರಬಲವಾದ ಆಗಮಿಕ-ಪೌರಾಣಿಕ ಹಿಂದೂ ಧರ್ಮ ಮತ್ತು ಜೈನ-ಬೌದ್ಧ ನಾಸ್ತಿಕ ಧರ್ಮಗಳನ್ನು ಮೀರಿ ಈ ಪರಂಪರೆ ಉಳಿದು ಬಂದುದೊಂದು ಮಹಾ ಸೋಜಿಗ" ಎಂಬುದಾಗಿ ಡಾ. ನೇಗಿನಹಾಳ ಅವರು ಅಭಿಪ್ರಾಯ ಪಟ್ಟಿದ್ದಾರೆ. ಮೈಲಾರ ಅಥವಾ ಖಂಡೋಬಾ ದೇವರು ಅಪ್ಪಟ ದೇಸಿ ದೇವರು. ಹೀಗಾಗಿ ಈ ದೇವರು ಭಾಷೆಗಳ ಗಡಿಯನ್ನು ಮೀರಿ ಸರ್ವವ್ಯಾಪಿಯಾಗಿ ಇಂದಿಗೂ ಕಂಗೊಳಿಸುತ್ತಿದ್ದಾನೆ.

ಕೃಪೆ: **ವಸುಧಾ ವಲಯ (ಕಸ್ತೂರಿ ಅಂಕಣ ಮಾಲಿಕೆ)**



ಶುಕ್ರವಾರ (03–07–2026) ದಂದು ಶ್ರೀಯುತ ಶಶಿಕಾಂತ ಜೋಶಿ ಮತ್ತು ಶ್ರೀಮತಿ ವೀಣಾ ಜೋಶಿ ದಂಪತಿಗಳು ಅತ್ಯಂತ ಭಕ್ತಿ–ಶ್ರದ್ಧೆಗಳಿಂದ ಮತ್ತು ಶಾಸ್ತ್ರೋಕ್ತವಾಗಿ ಸಂಕಷ್ಟಹರ ಚತುರ್ಥಿ ಪೂಜೆಯನ್ನು ನೆರವೇರಿಸಿಕೊಟ್ಟರು.




## ಮುಂಬೈ ನಗರಿ

ರಾಜೇಶ್ವರಿ ಜಿ.

ಮುಂಬೈ ಒಂದು ಮಹಾನಗರಿ
ಕೇಳದು ಬದಿಯಲಿ ಹೊಳೆದ ನಗಾರಿ
ರಾತ್ರಿ–ಹಗಲು ಒಂದೇ ಇಲ್ಲಿ
ಶ್ರಮ ಪಟ್ಟರೆ ಇದೆ ಬಾಳಿಲ್ಲಿ
ಇಲ್ಲಿಯ ಜನರಿಗೆ ಅವರವರ ಅವಸರ
ಓಡಾಡುವ ಜನರಿಗೆ ಇಲ್ಲಾ ಬೇಸರ
ಕೆಲಸವೆಂದರೆ ಬೇಸರವಿಲ್ಲ
ತಲೆ ಕೆರೆಯಲು ಪುರುಸೊತ್ತಿಲ್ಲ
ದೂರ ದೂರದ ಕಚೇರಿ ತಲುಪಲು
ಬರುವುದು ನಮ್ಮ ಸ್ಥಳೀಯ ರೈಲು
ಜೊತೆಯಲಿ ನಮ್ಮ ಮೆಟ್ರೋ ಆಟೋ
ತುರ್ತಿಗೆ ಬರುವುದು ಉಬರ್ ಓಲಾ ಆಟೋ
ಮನೆಯೊಂದಿರೆ ಜೀವನ ಸೂಪರ್
ಇರದಿದ್ದರೆ ಪ್ರತಿಕ್ಷಣ ನೈಟ್ಮೇರ್
ಹಸಿವಾದರೆ ನೀ ಡೋಂಟ್ ವರಿ



ತಿನ್ನಲು ಸಿಗುವುದು ತರಾವರಿ
ಸಮುದ್ರ ತೀರ ಬಲು ಚೆನ್ನ
ಕಳೆಯಲು ಪೂರಾ ದಿನವನ್ನ
ಎಡಬಲದಲ್ಲಿ ಅಂಗಡಿ ಸಾಲು
ತಿನ್ನಲು ಜನರ ಉದ್ದನೆ ಸಾಲು
ವಡಾ ಪಾವ್, ಭೇಲ್ ಮತ್ತು ಪಾನಿ ಪುರಿ
ಜೊತೆಯಲಿ ರುಚಿಕರ ಚುರು ಮುರಿ
ನಂತರ ಕುಡಿಯಲು ಕಾಫಿ ಚಹಾ
ಹೊಟ್ಟೆಯುಸುರಿತು ಅಹಾ ಅಹಾ.
ಗಣಪನ ಲಕ್ಷ್ಮಿಯ ದರುಶನ ನಿಮಗೆ
ಧನ್ಯರು ನೀವು ಅನಿಸಿತು ಮನಸಿಗೆ,
ಬರೆಯಲು ಇನ್ನೂ ಬಹಳವಿದೆ
ಹಾಳೆಲಿ ಜಾಗ ಕಡಿಮೆಯಿಯಿದೆ
ಬನ್ನಿರಿ ಮತ್ತು ಮುಂಬೈಗೆ
ತನ್ನಿರಿ ನಿಮ್ಮ ಹಾಸಿಗೆ–ಪೆಟ್ಟಿಗೆ

- ★ "ಯಾವತ್ತೂ ಕಲಿಯುವುದನ್ನು ನಿಲ್ಲಿಸಬೇಡಿ. ಏಕೆಂದರೆ ಜೀವನ ಎಂದಿಗೂ ಕಲಿಸುವುದನ್ನು ನಿಲ್ಲಿಸುವುದಿಲ್ಲ"
- ★ "ಮೊದಲ ಪ್ರಯತ್ನದಲ್ಲಿ ಗೆಲ್ಲುವವರು ಬದುಕಿನಲ್ಲಿ ಗೆಲ್ಲಬಲ್ಲರು. ಆದರೆ ಮೊದಲ ಪ್ರಯತ್ನದಲ್ಲಿ ಸೋತವರು ಜಗತ್ತನ್ನೇ ಗೆಲ್ಲಬಲ್ಲರು. ಯಾಕೆಂದರೆ ಸಂಕಟದೊಂದಿಗೆ ಸೆಣಸಾಡುವ ಮನಸ್ಸಿಗೆ ಛಲ ಹೆಚ್ಚು"
- ★ "ನೀನು ಕಳೆದು ಹೊದರೂ ಇತಿಹಾಸವು ನಿನ್ನನ್ನು ಗೌರವಿಸುವಂತೆ ಬಾಳಿ ಹೋಗು..."
- ★ "ಜೀವನದಲ್ಲಿ ಯಶಸ್ಸು ಹೇಗಿರಬೇಕೆಂದರೇ ನಮ್ಮನ್ನು ತಿರಸ್ಕರಿಸಿ ಹೋದವರೆಲ್ಲ ಮತ್ತೆ ನಮ್ಮನ್ನು ಹುಡುಕಿಕೊಂಡು ಬರುವಂತಿರಬೇಕು..."

Edited by Dr. Jyothi Satish, Printed & Published by Hon. Secretary, The Mysore Association Bombay, Mumbai - 400019. Tel.: 2403 7065
Email : mysoreassociation.mumbai@gmail.com Website: www.mysoreassociation.in Printed by Aarati Art Printers, Fort, Mumbai - 1 Mob.: 98201 60077